# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

### ತರಗತಿ

### III

### ಭಾಗ - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪ್ಪುರ, ತಿರುವನಂತಪುರ - 695 012

2024

ST-491-1-KANNADA-3-VOL-1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - III (Part I)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA III - PART I

**Advisor**

| | |
|---|---|
| Shivashankara P. | Asst. Professor, GPM College, Manjeshwar. |

**Chairperson**

| | |
|---|---|
| Dr. Vedavathi | Asst. Professor, Government College, Kasaragod. |

**Experts**

| | |
|---|---|
| Dr. M.N. Mahesha | HOD, Kannada Department, Madurai Kamaraj, Chennai. |

**Participants**

| | |
|---|---|
| Balakrishna P. | Rtd. HM, GLPS Kunjathur. |
| Shivarama Bhat S. | HM, GLPS Kayarkatte. |
| Smt. Jyothi N. | HM, GLPS Kannur. |
| Smt. Seema Suvarna | HM, GBLPS Ujarulwar. |
| Mohana U. | PD Tr, GHSS Bangramanjeshwar. |
| Salaudeen | LPST, GHSS Angadimogar. |
| Anil Kumar U. | LPST, GWLPS Bela. |
| Melvin D'Souza P. | LPST, GHSS Bekur. |

**Artists**

| | |
|---|---|
| Bala Madhurakanana | Rtd. Drawing Teacher, MSCHSS Nirchal. |
| Divakar | Rtd. Drawing Teacher, Kasaragod. |
| Prakash | Drawing Teacher, BRC Manjeshwara. |
| Satheesh | Drawing Teacher, BRC Kumbla. |

**Academic Co-ordinator**

Dr. Sahaya Dhas D.
Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| **1.** | **ಹಸಿರಿನ ಸಿರಿ** | 7-18 |
| | 1. ಕಾಡನುಳಿಸಿ ಬೆಳೆಸುವ (ಪದ್ಯ) | |
| | 2. ಸಹಜೀವನ (ಕಥೆ) | |
| **2.** | **ಉಳುಮೆಯ ಹಿರಿಮೆ** | 19-30 |
| | 1. ಅನ್ನದಾತ (ಗದ್ಯ) | |
| | 2. ತೋಟದ ಪಾಟ (ಪದ್ಯ) | |
| | 3. ತೆನೆ ಹಬ್ಬ (ಗದ್ಯ) | |
| **3.** | **ಸಂಸ್ಕೃತಿ ಸುಧೆ** | 31-45 |
| | 1. ಹಬ್ಬಗಳು (ಗದ್ಯ) | |
| | 2. ಪಾರ್ತಿಸುಬ್ಬ (ಗದ್ಯ) | |
| **4.** | **ದಾರಿದೀಪ** | 46-62 |
| | 1. ಆಪತ್ತಿಗಾದವನೇ ಗೆಳೆಯ (ಕಥೆ) | |
| | 2. ಬಿಡುಗಡೆಯ ದಾರಿ (ಕಥೆ) | |
| | 3. ಸತ್ಯವಂತ ಮಾದ (ಪದ್ಯ) | |

# ಭಾರತದ ಸಂವಿಧಾನ


## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 1 ಹಸಿರಿನ ಸಿರಿ

## ಬಣ್ಣ ಹಚ್ಚಿರಿ ಹೆಸರು ಬರೆಯಿರಿ

“ಹಸಿರಿಲ್ಲದೆ ಉಸಿರಿಲ್ಲ ಉಸಿರಿಲ್ಲದೆ ಜೀವವಿಲ್ಲ” ಎನ್ನುವ ಸತ್ಯವನ್ನು ಹಸಿರಿನ ಸಿರಿ ಎಂಬ ಘಟಕವು ಸಾರಿ ಹೇಳುವುದು. ಮನುಷ್ಯನು ಪರಿಸರದೊಂದಿಗೆ ಸೌಹಾರ್ದದಿಂದ ವರ್ತಿಸಬೇಕಾದ ಅಗತ್ಯ ವನ್ನು ಇಲ್ಲಿ ಹೇಳಲಾಗಿದೆ. ಎಲ್ಲವೂ ಪರಿಸರದಿಂದಲೇ. ಆದರೆ ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಹಲವು ವಿಧಗಳಿಂದ ಲೂಟಿ ಮಾಡುತ್ತಾ ಇದ್ದಾನೆ. ಈ ಪ್ರವೃತ್ತಿಯನ್ನು ಇದಿರಿಸಬೇಕಾದುದು ಹೊಸ ತಲೆಮಾರಿನ ಕರ್ತವ್ಯವಾಗಿದೆ.



# ಕಾಡನುಳಿಸಿ ಬೆಳೆಸುವ



ಗಿಡವ ನೆಡುವ ಗಿಡವ ನೆಡುವ
ನೆಟ್ಟು ಬೆಳೆವ ಮರಗಳ
ಮುಂದೆ ಅವು ನೀಡದಿರವು
ದಿನಕೆ ನೂರು ವರಗಳ





ಮರಗಳಿಂದ ಕೇಳೊ ಕಂದ
ಉಳಲು ನೊಗವು ನೇಗಿಲು
ಮನೆಗೆ ಜಂತಿ ಮೇಜಿ ಕುರ್ಚಿ
ಏಣಿ ಕಿಟಿಕಿ ಬಾಗಿಲು



ಮಣ್ಣು ಹೊನ್ನು ಹೂವು ಹಣ್ಣು
ಪತ್ರೆ ಗಂಧ ಚಂದನ
ಗೋಂದು ರಾಳ ಮೂಲಿಕೆಗಳ
ಅಡವಿ ನಮಗೆ ನಂದನ



ಮೇವು ದನಕೆ ಸೌದೆ ಜನಕೆ
ನೀಡುತಿರುವ ಕಾನನ
ಹಸಿರು ಹೊದೆದು ಹೊಮ್ಮಿಸುವುದು
ಚಿಲಿ ಚಿಲಿ ಪಿಲಿ ಗಾಯನ



ಸುತ್ತ ಸೊಂಪು ಸುಮದ ಕಂಪು
ನೆರಳ ತಂಪು ಕಾಡಲಿ
ನೆಲಕೆ ಮಳೆಯು ಹೊಲಕೆ ಬೆಳೆಯು
ಕಾಡು ಮೆರೆವ ನಾಡಲಿ



ಹಕ್ಕಿ ಹಿಂಡು ಪ್ರಾಣಿ ದಂಡು
ಕೋಟಿ ಜೀವ ಸಾಗರ
ಕೂಡಿ ಆಡಿ ಹಿಗ್ಗಿ ಹಾಡಿ
ನಲಿವ ಚೆಲುವಿನಾಗರ



ತೋಪು ಕಾಡು ನಲಿವ ನಾಡು
ಶಾಂತಿ ಸುಖದ ಮಂದಿರ
ಸೃಷ್ಟಿ ಸಮತೆ ನೆಲೆಸಿ ಜನಕೆ
ಬಾಳು ಸಹಜ ಸುಂದರ

**- ಪಳಕಳ ಸೀತಾರಾಮ ಭಟ್ಟ**



## ಚಟುವಟಿಕೆಗಳು

**ಪದ್ಯವನ್ನು ರಾಗವಾಗಿ ಹಾಡಿರಿ.**

**ಕವಿತೆಯ ಸಾಲುಗಳಲ್ಲಿ ಒಂದೇ ರೀತಿಯ ಅಕ್ಷರದಲ್ಲಿ ಕೊನೆಯಾಗುವ ಪದಗಳನ್ನು ಬರೆಯಿರಿ.**

ಮರಗಳ – ವರಗಳ

.......................................

.......................................


.......................................

.......................................

**ಚರ್ಚಿಸೋಣ**

- ಗಿಡಗಳನ್ನು ನೆಡುವುದರ ಉದ್ದೇಶವೇನು?
- ಕಾಡುಗಳಿಂದ ನಮಗಿರುವ ಪ್ರಯೋಜನಗಳೇನು?

**ಪದಸೂರ್ಯ ಪೂರ್ತಿಗೊಳಿಸಿರಿ**





**ಪರಿಸರಕ್ಕೆ ಸಂಬಂಧಿಸಿದ ಒಂದು ಚಿತ್ರ ಬಿಡಿಸಿ ಬಣ್ಣ ಹಚ್ಚಿರಿ.**

# ಸಹಜೀವನ

ಮಾದೇನ ಹಳ್ಳಿಯಲ್ಲಿ ಮಾದಪ್ಪನೆಂಬ ತೋಟದ ಮಾಲಿಕನಿದ್ದನು. ಅವನ ತೋಟದಲ್ಲಿ ಪೇರಳೆ, ನೇರಳೆ, ಮಾವು, ಹಲಸು, ದಾಳಿಂಬೆ ಇತ್ಯಾದಿ ಬಗೆ ಬಗೆಯ ಹಣ್ಣುಗಳ ಮರಗಳು ತುಂಬಿಕೊಂಡಿದ್ದುವು. ಇವುಗಳಲ್ಲಿ ಮಾವಿನಮರವು ಅತಿ ವಿಶಾಲವಾಗಿ ಬೆಳೆದಿತ್ತು. ಹಲವಾರು ಪ್ರಾಣಿ ಪಕ್ಷಿಗಳು ಈ ಮರವನ್ನು ಆಶ್ರಯಿಸಿದ್ದುವು. ಆ ಮರದ ಹಣ್ಣುಗಳೆಂದರೆ ಎಲ್ಲರಿಗೂ ಬಹಳ ಇಷ್ಟ. ಪ್ರತಿದಿನ ಸಂಜೆಯ ವೇಳೆ ಆಟವಾಡಲು ಮಕ್ಕಳು ಮರದಡಿಗೆ ಬರುತ್ತಿದ್ದರು. ದಾರಿಹೋಕರಿಗೂ, ಊರವರಿಗೂ ನೆರಳನ್ನು ನೀಡುತ್ತಿತ್ತು. ಆ ಮರವೆಂದರೆ ಎಲ್ಲರಿಗೂ ಅಚ್ಚುಮೆಚ್ಚು. ಆ ತೋಟದಲ್ಲಿ ಎಲ್ಲರೂ ಸಂತೋಷ ಸಂಭ್ರಮದಿಂದ ಸಮಯ ಕಳೆಯುತ್ತಿದ್ದರು.





ಮಾದಪ್ಪನಿಗೆ ಈ ದೃಶ್ಯಗಳನ್ನು ಕಂಡಾಗ ದುರಹಂಕಾರ ಬೆಳೆಯಿತು. "ನನ್ನ ತೋಟವನ್ನು ಆಶ್ರಯಿಸಿ ಈ ಹಳ್ಳಿಯ ಜನರು ಸಂತೋಷಪಡುತ್ತಿದ್ದಾರೆ. ಅದಾಗದು, ಇದಕ್ಕೊಂದು ಉಪಾಯ ಹುಡುಕಬೇಕು" ಎಂದು ತೀರ್ಮಾನಿಸಿದನು. ತನ್ನ ತೋಟಕ್ಕೆ ಇನ್ನು ಮುಂದೆ ಯಾರೂ ಬರಬಾರದೆಂದು ತೋಟದ ಸುತ್ತಲೂ ಎತ್ತರದ ಬೇಲಿ ಹಾಕಿಸಿದನು. ಹಕ್ಕಿಗಳನ್ನು ಕಲ್ಲೆಸೆದು



ಓಡಿಸಿದನು. “ಇಲ್ಲಿಗೆ ಯಾರೂ ಬರಬಾರದು” ಎಂಬ ಸೂಚನಾ ಫಲಕವನ್ನು ಸ್ಥಾಪಿಸಿದನು.

ದಿನ ಕಳೆದಂತೆ ಮಕ್ಕಳು ಮತ್ತು ಹಳ್ಳಿಗರು ತೋಟಕ್ಕೆ ಬರುವುದು ನಿಂತೇ ಹೋಯಿತು. ಪಕ್ಷಿಗಳ ಕಲರವ, ಮಕ್ಕಳ ಕೇಕೆ, ನಲಿದಾಟ ಇಲ್ಲದೆ ತೋಟವು ಬಣಗುಟ್ಟತೊಡಗಿತು. ಇದರಿಂದಾಗಿ ಮಾವಿನ ಮರವು ತುಂಬಾ ನೊಂದುಕೊಂಡಿತು. ವರ್ಷಗಳು ಕಳೆದವು. ಮಾವಿನಮರ ಹೂ ಬಿಡಲಿಲ್ಲ, ಹಣ್ಣುಗಳಾಗಲಿಲ್ಲ, ದಿನಗಳೆದಂತೆ ಮರವು ಕಳೆಗುಂದತೊಡಗಿತು. ಮಾವಿನಮರದ ಈ ಸ್ಥಿತಿಯನ್ನು ಕಂಡು ಮಾದಪ್ಪ ಮರುಕಗೊಂಡನು. ಪ್ರಾಣಿ ಪಕ್ಷಿಗಳು, ಮಕ್ಕಳು, ಹಳ್ಳಿಯ ಜನರು ತೋಟಕ್ಕೆ ಬಾರದಿರುವುದೇ ಇದಕ್ಕೆ ಕಾರಣವಾಗಿರಬಹುದು; ಎಂದು ಅಂದುಕೊಂಡನು. ಕೂಡಲೇ ಅವನು ಸ್ಥಾಪಿಸಿದ ಸೂಚನಾ ಫಲಕವನ್ನು ಕಿತ್ತೆಸೆದನು. ಹಳ್ಳಿಯ ಮಕ್ಕಳನ್ನು ತೋಟಕ್ಕೆ ಆಹ್ವಾನಿಸಿದನು. ಮಕ್ಕಳೆಲ್ಲ ಓಡೋಡಿ ಬಂದರು. ಮರದಡಿಯಲ್ಲಿ

ಆಟವಾಡತೊಡಗಿದರು. ಮಕ್ಕಳ ಕಿಲಕಿಲ ನಗುವಿನ ಸದ್ದನ್ನು ಕೇಳಿ ಪ್ರಾಣಿಗಳೂ, ಪಕ್ಷಿಗಳೂ ಬಂದು ಸೇರಿದವು. ಮಾವು ಹೂ ಬಿಟ್ಟಿತು. ಕಾಯಿಗಳು ಬಲಿತವು. ಹಣ್ಣುಗಳಾದುವು. ಹಕ್ಕಿಗಳ ಇಂಚರ, ಪ್ರಾಣಿಗಳ ಒಡನಾಟ, ಮಕ್ಕಳ ಕುಣಿದಾಟವನ್ನು ಕಂಡ ಮಾದಪ್ಪನು ಸಂತೋಷಗೊಂಡನು. ತೋಟವು ನಂದನವನವಾಯಿತು.

## ಚಟುವಟಿಕೆಗಳು

### ಪದವನ್ನು ಸರಿಪಡಿಸಿರಿ

ಆಸ್ರಯ -

ಕಳರವ -

ಆವ್ಹಾನಿಸು -

ತೀರ್ಮಾಣಿಸು -

ಬನಗುಟ್ಟು -

### ಸಮಾನಾರ್ಥ ಪದಗಳನ್ನು ಹುಡುಕಿ ಬರೆಯಿರಿ.

ಮರ -

ಪಕ್ಷಿ -

ಹರುಷ -

ಮಾಲಿಕ -

ಹೂ -

ಕುಸುಮ, ವೃಕ್ಷ,
ಖಗ, ಆನಂದ,
ಹಕ್ಕಿ, ತರು,
ಧಣಿ, ಸಂತೋಷ,
ಯಜಮಾನ, ಪುಷ್ಪ

### ಜೋಡಿಸಿ ಬರೆಯಿರಿ

ಕಲ್ಲು + ಎಸೆದು -

ಹಣ್ಣುಗಳು + ಆಗಲಿಲ್ಲ -

ಕಿತ್ತು + ಎಸೆದನು -

ಓಡಿ + ಓಡಿ -


ಮರದ + ಅಡಿ -

ಕುಣಿದು + ಆಟ -

## ಉತ್ತರಿಸಿರಿ

1. ಮಾದಪ್ಪನ ತೋಟದಲ್ಲಿ ಯಾವೆಲ್ಲ ಮರಗಳು ಇದ್ದವು?
2. ಮಾದಪ್ಪನು ತೋಟಕ್ಕೆ ಬೇಲಿ ಹಾಕಲು ಕಾರಣವೇನು?
3. ಮಾದಪ್ಪನಿಗೆ ತನ್ನ ತಪ್ಪಿನ ಅರಿವು ಹೇಗೆ ಆಯಿತು?
4. ಮಾವಿನಮರವು ಎಲ್ಲರಿಗೂ ಅಚ್ಚು ಮೆಚ್ಚು. ಯಾಕೆ?

## ಚಿತ್ರ ನೋಡಿ ಕಥೆ ಬರೆಯಿರಿ



**ಕೆಳಗಿನ ಆಶಯಗಳು ಬರುವಂತಹ ವಾಕ್ಯಗಳನ್ನು ಪಾಠಭಾಗದಿಂದ ಆರಿಸಿ ಬರೆಯಿರಿ.**

1. ಮಾದಪ್ಪನ ತೋಟದಲ್ಲಿ ಬೇರೆ ಬೇರೆ ರೀತಿಯ ಹಣ್ಣುಗಳ ಮರಗಳಿದ್ದುವು.
2. ತೋಟಕ್ಕೆ ಯಾರೂ ಬಾರದಂತೆ ತಡೆಗಟ್ಟಿದನು.
3. ಯಾರೂ ತೋಟಕ್ಕೆ ಬಾರದಿರುವುದು ಇದಕ್ಕೆ ಕಾರಣವಾಗಿದೆ.

**ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಘೋಷಣ ವಾಕ್ಯಗಳನ್ನು ರಚಿಸಿರಿ.**

**ಕಡಿಯಬೇಡ ಮರ ಕೊಡುವುದದು ವರ**

## ಪದ್ಯವನ್ನು ರಾಗವಾಗಿ ಹಾಡಿರಿ... ಕುಣಿಯಿರಿ

### ಆಡೋಣ ಬನ್ನಿ ಕಣ್ಣಾ ಮುಚ್ಚಾಲೆ

ಆಡೋಣ ಬನ್ನಿ ಕಣ್ಣಾ ಮುಚ್ಚಾಲೆ
ತೂಗೋಣ ಬನ್ನಿ ಉಯ್ಯಾಲೆ
ಜೀವನ ಒಂದು ನಾಟಕ ಶಾಲೆ
ನಾವೆಲ್ಲ ಕುಣಿಯುವ ನರ್ತನ ಶಾಲೆ
ಉಯ್ಯಾಲೆ ......... ಚಂಪಾಲೆ

ಸುತ್ತಾಲು ಚೆಲ್ಲಿದ ರಂಗುರಂಗೋಲೆ
ಬಳುಕುತ ಬರುವಳು ವನಮಾಲೆ
ಭರದಿಂದ ಬಂದು ಪಚ್ಚೆಯ ಸಾಲೆ
ತೂಗಾಡಿ ಕರೆದಾವು ತೆಂಗಿನ ಸಾಲೆ
ಉಯ್ಯಾಲೆ ......... ಚಂಪಾಲೆ

ಹಕ್ಕಿಗಳಿಂಚರ ಕರೆಯೋಲೆ
ಕುಣಿಯುತ ಬರುವಳು ನವ್ವಾಲೆ
ಇಂಪು ಇಂಪಿನ ಗುಂಪು ಕೋಗಿಲೆ
ಕಂಪನು ಸೂಸುವ ಹೂಗಳ ಮಾಲೆ
ಉಯ್ಯಾಲೆ ......... ಚಂಪಾಲೆ




### ದಿ ಗ್ರೇಟ್ ಬನಿಯನ್

ದಿ ಗ್ರೇಟ್ ಬನಿಯನ್ ಎಂಬುದು ಅತಿ ದೊಡ್ಡ ಆಲದ ಮರವಾಗಿದೆ. ಇದು ಆಚಾರ್ಯ ಜಗದೀಶ್ ಚಂದ್ರ ಬೋಸ್ ಇಂಡಿಯನ್ ಬೊಟಾನಿಕಲ್ ಗಾರ್ಡನ್ (ಸಸ್ಯೋದ್ಯಾನ) ಕೋಲ್ಕತ್ತಾ ಸಮೀಪದ ಹೌರಾ ಜಿಲ್ಲೆಯ ಶಿಬ್ಪುರ್ ಎಂಬಲ್ಲಿದೆ. ಈ ಆಲದ ಮರವು 250 ವರ್ಷಗಳಷ್ಟು ಹಳೆಯದಾಗಿದೆ. ಮರವು ಸುಮಾರು 5 ಎಕರೆ ವಿಸ್ತಾರದಲ್ಲಿ ಹರಡಿಕೊಂಡಿದೆ.

ST-491-2-KANNADA-3-VOL-1

# ಕಲಿಕಾ ಕಣಜ




| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಪ್ರವೇಶ ಚಟುವಟಿಕೆ, ಪದಸೂರ್ಯ, ಪ್ರಾಸ ಪದಗಳು, ಪದ್ಯ ಪೂರ್ತಿಗೊಳಿಸಿರಿ, ಪದ ಸರಿಪಡಿಸಿ, ಸಮಾನಾರ್ಥ ಪದಗಳನ್ನು ಹುಡುಕಿರಿ, ಜೋಡಿಸಿ ಬರೆಯಿರಿ, ಉತ್ತರಿಸಿರಿ, ಪದ ಕ್ರಮೀಕರಣ, ವಾಕ್ಯ ರಚನೆ, ಯೋಚಿಸಿ ಬರೆಯಿರಿ, ಚಿತ್ರಕಥೆ, ಆಶಯ, ಪ್ರಾಸಪದ, ಘೋಷಣ ವಾಕ್ಯ, ನಾಲಿಗೆ ಸುರುಳಿ. |
| ಪಠ್ಯ ಪುಸ್ತಕ | ಪ್ರವೇಶ ಚಟುವಟಿಕೆ, ಪದಸೂರ್ಯ, ಪ್ರಾಸ ಪದ, ಪದ ಸರಿಪಡಿಸಿರಿ, ಸಮಾನಾರ್ಥ ಪದ, ಜೋಡಿಸಿ ಬರೆಯಿರಿ, ಘೋಷಣ ವಾಕ್ಯ |
| ಆಡಿಯೋ | ಕಾಡನ್ನುಳಿಸಿ ಬೆಳೆಸುವ ಪದ್ಯ, ಗಿಡವ ನೆಡುವ ಪದ್ಯ, ಆಡೋಣ ಬನ್ನಿ ಪದ್ಯ |
| ಪೋರ್ಟ್ ಪೋಲಿಯೊ | ಪರಿಸರಕ್ಕೆ ಸಂಬಂಧಿಸಿದ ಬಣ್ಣ ಹಚ್ಚಿದ ಚಿತ್ರ, ಎಲ್ಲಾ ರಚನೆಗಳು, ಘೋಷಣ ವಾಕ್ಯಗಳು |
| ಭಿತ್ತಿಪತ್ರಿಕೆ | ರಚನೆಗಳು |
| ವೀಡಿಯೋ | ಕೃಷಿಗೆ ಸಂಬಂಧಿಸಿ ವೀಡಿಯೋ |
| ಬಾಲಸಭೆ | ಪಾಠಭಾಗದಲ್ಲಿರುವ ಪದ್ಯಗಳು |

# 2 ಉಳುಮೆಯ ಹಿರಿಮೆ

ನಾವು ಕೃಷಿಗೆ ಬಹಳ ಪ್ರಾಧಾನ್ಯವನ್ನು ನೀಡುತ್ತಿದ್ದೇವೆ. ಆದರೂ ಬರಬರುತ್ತಾ ಭತ್ತದ ಕೃಷಿಯು ಕಡಿಮೆಯಾಗುತ್ತಾ ಬಂದಿದೆ. ಹೊಲಗದ್ದೆಗಳಲ್ಲಿ ತೆಂಗು, ಕಂಗು, ಬಾಳೆ ಮೊದಲಾದ ವಾಣಿಜ್ಯ ಕೃಷಿಗಳನ್ನು ಮಾಡುತ್ತಿದ್ದೇವೆ. ಇದೇ ರೀತಿಯಲ್ಲಿ ಮುಂದುವರಿದರೆ ನಾವು ಅನ್ನಕ್ಕಾಗಿ ಇನ್ನಿತರ ರಾಜ್ಯಗಳನ್ನು ಸಂಪೂರ್ಣವಾಗಿ ಆಶ್ರಯಿಸಬೇಕಾದ ಆಪತ್ತು ಬರಬಹುದು.


ಹೊಸ ತಲೆಮಾರಿನ ಮಕ್ಕಳು ಕೃಷಿಯ ಪ್ರಾಧಾನ್ಯವನ್ನು ತಿಳಿಯಬೇಕಾಗಿದೆ. ಆ ಮೂಲಕ ಮುಂದೆ ಬಂದೊದಗಬಹುದಾದಂತಹ ಆಹಾರದ ಕೊರತೆಯನ್ನು ಪರಿಹರಿಸಬಹುದು.




ಗೆಳೆಯರು ಅಭಿನಯಿಸಿದ್ದು

# ರೈತ ನಮ್ಮ ಅನ್ನದಾತ

ಭಾರತವು ಕೃಷಿ ಪ್ರಧಾನ ದೇಶವಾಗಿದೆ. ಇಲ್ಲಿ ಹೆಚ್ಚಿನವರು ಬೇಸಾಯವನ್ನು ಅವಲಂಬಿಸಿದ್ದಾರೆ. ರೈತರು ಹೊಲಗದ್ದೆಗಳಲ್ಲಿ ದುಡಿದು ದೇಶಕ್ಕೆ ಅನ್ನ ನೀಡುತ್ತಾರೆ. ಆದುದರಿಂದಲೇ ರೈತನನ್ನು 'ಅನ್ನದಾತ' ಎಂದು ಕರೆಯುತ್ತಾರೆ.



ರೈತರು ಹೊಲಗದ್ದೆಗಳಲ್ಲಿ ಮಳೆ, ಗಾಳಿ, ಬಿಸಿಲನ್ನು ಲೆಕ್ಕಿಸದೆ ಕಷ್ಟಪಟ್ಟು ದುಡಿಯುತ್ತಾರೆ. ಅವರು ಹೊಲಗಳಲ್ಲಿ ಆಹಾರ ಬೆಳೆಗಳನ್ನು ಮಾತ್ರವಲ್ಲದೆ ವಾಣಿಜ್ಯ ಬೆಳೆಗಳನ್ನೂ ಬೆಳೆಸುತ್ತಾರೆ.

ರೈತರು ಬೇಸಾಯದ ಅಗತ್ಯಗಳಿಗಾಗಿ ಎತ್ತು, ಕೋಣ ಮೊದಲಾದ ಪ್ರಾಣಿಗಳನ್ನು ಸಾಕುತ್ತಾರೆ. ಈ ಪ್ರಾಣಿಗಳ ಸಹಾಯದಿಂದ ಹೊಲದಲ್ಲಿ ಉಳುವಿಕೆಯಂತಹ ಕೆಲಸಗಳನ್ನು ಮಾಡುತ್ತಾರೆ. ಹೊಲ, ಮನೆಗಳ ರಕ್ಷಣೆಗಾಗಿ ನಾಯಿಗಳನ್ನು ಕೂಡ ಸಾಕುತ್ತಾರೆ. ತಾವು ಸಾಕಿದ ಪ್ರಾಣಿಗಳನ್ನು ಅವರು ತಮ್ಮ ಕುಟುಂಬದ ಸದಸ್ಯರಂತೆ ಕಾಣುತ್ತಾರೆ.

ಹಿಂದಿನ ಕಾಲದಲ್ಲಿ ಹೊಲಗಳಲ್ಲಿ ಕೆಲಸ ಮಾಡುವುದು ಬಹಳ ಕಷ್ಟಕರವಾಗಿತ್ತು. ಆದರೆ ಇಂದು ರೈತರ ಅನುಕೂಲಕ್ಕಾಗಿ ಟಿಲ್ಲರ್, ಟ್ರಾಕ್ಟರ್ ಮೊದಲಾದ ಆಧುನಿಕ ಯಂತ್ರೋಪಕರಣಗಳು ಬಳಕೆಯಲ್ಲಿವೆ. ಇದರಿಂದಾಗಿ ರೈತರು ಮೊದಲಿನಷ್ಟು ಶ್ರಮ ಪಡಬೇಕಾಗಿಲ್ಲ. ಸರಕಾರವು ರೈತರ ಕ್ಷೇಮಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ.



ಹಿಂದಿನಕಾಲದಲ್ಲಿ ರೈತರು ಕೇವಲ ಮಳೆಯನ್ನು ಆಶ್ರಯಿಸಿ ಬೇಸಾಯ ಮಾಡುತ್ತಿದ್ದರು. ಆದರೆ ಈಗ ಹಲವು ವಿಧದ ನೀರಾವರಿ ಯೋಜನೆಗಳ ಮೂಲಕ ವಿವಿಧ ಬೆಳೆಗಳನ್ನು ಬೆಳೆಸುತ್ತಾರೆ.

ಅನೇಕ ರೈತರು ಕೇವಲ ಬೇಸಾಯವನ್ನಷ್ಟೇ ಅಲ್ಲದೆ ಹೈನುಗಾರಿಕೆ, ಕೋಳಿ ಸಾಕಣೆ, ಕುರಿಸಾಕಣೆ, ಜೇನುಕೃಷಿ, ರೇಷ್ಮೆ ಕೃಷಿ ಮೊದಲಾದ ಕೃಷಿಗಳಿಗೂ ಮಹತ್ವ ನೀಡಿದ್ದಾರೆ. ಕುಟುಂಬದ ಎಲ್ಲಾ ಸದಸ್ಯರ ಸಹಕಾರದಿಂದ ಬೇಸಾಯಗಾರಿಕೆ ಸುಲಭವಾಗುವುದು.

ನಾಡಿನ ಬೆನ್ನೆಲುಬಾದ ರೈತರು ದೇಶದ ಜನರ ಹಸಿವನ್ನು ತಣಿಸುತ್ತಾರೆ. ಅವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸೋಣ.

**"ರೈತನಿದ್ದರೆ ಜಗದ ಉಳಿವು: ಇಲ್ಲದಿದ್ದರೆ ಜಗದ ಅಳಿವು."**

## ಚಟುವಟಿಕೆಗಳು

### ಬಿಟ್ಟ ಅಕ್ಷರವನ್ನು ತುಂಬಿಸಿರಿ

- ಅನ್ನ..... ತ
- ಉ ...... ಕರ ......
- ಯಂ ..... ಪಕರಣ
- ವಾ ..... ಜ್ಯ

### ಪ್ರಶ್ನೋತ್ತರ

1. ರೈತರು ಬೇಸಾಯದೊಂದಿಗೆ ಇತರ ಯಾವೆಲ್ಲಾ ಕೃಷಿಗಳನ್ನು ಮಾಡುತ್ತಾರೆ?
2. ರೈತರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸುವುದು ಯಾಕೆ?

**ಕೆಳಗಿನ ಕೋಣೆಯಲ್ಲಿರುವ ಅಕ್ಷರಗಳಿಂದ ಕೃಷಿ ಉಪಕರಣಗಳನ್ನು ಹುಡುಕಿ ಬರೆಯಿರಿ**

| | | | | |
|---|---|---|---|---|
| ಹಾ | ಶಿ | ಪಿ | ತಿ | ನೇ |
| ಕ | ರೆ | ಕ್ಕಾ | ವಿ | ಗಿ |
| ತ್ತಿ | ನೊ | ಸು | ದ | ಲು |
| ಸಿ | ಗ | ಗು | ದ್ದ | ಲಿ |

1. ಹಾರೆ ................................

................................

................................

................................

................................

................................



ಲಾಲ್ ಬಹದ್ದೂರ್ ಶಾಸ್ತ್ರಿಯವರು ಭಾರತದ ದ್ವಿತೀಯ ಪ್ರಧಾನಮಂತ್ರಿಯಾಗಿದ್ದರು. ದೇಶದ ಸೈನಿಕರು ಮತ್ತು ರೈತರನ್ನು ಗೌರವಿಸುವ ಸಲುವಾಗಿ ಅವರು ಹೊರಡಿಸಿದ ಸುಪ್ರಸಿದ್ಧ ಘೋಷಣೆ

**"ಜೈ ಜವಾನ್ ಜೈ ಕಿಸಾನ್"**

# ತೋಟದ ಪಾಟ



ತೋಟದ ಕೆಲಸದಿ
ಆಟವು ಸೇರಿದೆ
ಆಟವು ಪಾಟವು ಅದೆ ಬನ್ನಿ!
ಮಣ್ಣಿನ ಗುಣದಲಿ
ಮಣ್ಣಿನ ಋಣದಲಿ
ಜೀವನ ಪಾವನವಿದೆಯೆನ್ನಿ!



ಸಾಲಲಿ ಸಾಗಿ
ತೋಟಕೆ ಹೋಗಿ
ಹಾರೆ ಪಿಕಾಸುಗಳನು ಹಿಡಿದು;
ಚಂದದಿ ನಿಂದು
ನೀವೊಂದೊಂದು
ಕಳವನು ಕೆತ್ತಿರಿ ಕಡಿಕಡಿದು.



ಕಳವನು ಕೆತ್ತಿ
ಬೀಜವ ಬಿತ್ತಿ
ನೀರೆರೆಯುತ ಸಸಿ ಮಾಡುವುದು;
ಹಗ್ಗವ ಹಿಡಿದು
ಸಾಲನು ಕಡಿದು
ಬೂದಿಗೊಬ್ಬರವ ತುಂಬುವುದು.

ಅದರಲಿ ಗಿಡವ
ಮುದದಲಿ ನಡುವ
ದಿನದಿನ ನೀರೆರೆಯುತಲಿರುವ;
ಬೆಳೆವುದು ಬಹಳ
ತರಕಾರಿ ಫಲ
ಶಕ್ತಿ ಶರೀರಕೆ ನಾವ್ತರುವ!

ಸುತ್ತಲು ಸುಮಸುಮ
ಚೆಲ್ಲಲಿ ಗಮಗಮ
ನಾನಾ ಬಣ್ಣದ ಸಸಿ ನಡುವ
ಕೆಂಪು ಗುಲಾಬಿಯ
ತಂಪಿನ ಜಾಜಿಯ
ಕಂಪು ಮಲ್ಲಿಗೆಯ ಹೂ ಗಿಡವ

ನಮ್ಮಯ ನಾಡು
ಹೆಮ್ಮೆಯ ನಾಡು
ಕೃಷಿ ನಮ್ಮಯ ನಾಡಿನ ಸಾರ;
ಕೃಷಿಕನೆ ಭಾರತ
ಭಾಗ್ಯವಿಧಾತನು
ಕೃಷಿ ನಮಗೆಲ್ಲರಿಗನ್ನಾಧಾರ!

- **ಕಯ್ಯಾರ ಕಿಞ್ಞಣ್ಣ ರೈ**





ಕಯ್ಯಾರ ಕಿಞ್ಞಣ್ಣ ರೈಯವರು ಕಾಸರಗೋಡು ತಾಲೂಕಿನ ಪೆರಡಾಲ ಗ್ರಾಮದಲ್ಲಿ 1915 ಜೂನ್ 8 ರಂದು ಜನಿಸಿದರು. ಇವರ ಕಾವ್ಯನಾಮ ದುರ್ಗಾದಾಸ. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಶತಮಾನದ ಗಾನ, ಶ್ರೀಮುಖ, ಪುನರ್ನವ ಇತ್ಯಾದಿ ಇವರ ಪ್ರಧಾನ ಕೃತಿಗಳಾಗಿವೆ.

## ಪದ್ಯದಲ್ಲಿರುವ ಪ್ರಾಸಪದಗಳನ್ನು ಹುಡುಕಿ ಬರೆಯಿರಿ.

## ಕೊಟ್ಟಿರುವ ಉಪಕರಣಗಳ ಉಪಯೋಗಗಳನ್ನು ಬರೆಯಿರಿ.

 -

 -

 -


 -

 -

## ಅಕ್ಷರಗಳನ್ನು ಕ್ರಮೀಕರಿಸಿ ಪದ ರಚಿಸಿರಿ

| | | | | | | | |
|---|---|---|---|---|---|---|---|
| ವಿ | ವ | ಪಾ | ನ | ದೆ | ನ್ನಿ | ಯೆ | |
| ದ | ಣ | ಗು | ಲಿ | | | | |
| ಲಾ | ಗು | ಬಿ | | | | | |
| ದಿ | ಬೂ | ಬ್ಬ | ಗೊ | ರ | | | |
| ಧಾ | ಗ್ಯ | ಭಾ | ವಿ | ತ | | | |

# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಬಿಟ್ಟ ಅಕ್ಷರ ತುಂಬಿಸುವುದು, ಪ್ರಶ್ನೋತ್ತರ, ವಾಕ್ಯ ರಚನೆ, ಹುಡುಕಿ ಬರೆಯಿರಿ, ಸಂದರ್ಶನ, ಘೋಷಣ ವಾಕ್ಯ, ಉಪಕರಣಗಳ ಉಪಯೋಗ, ಪ್ರಾಸಪದ, ಪಠ್ಯಪುಸ್ತಕ ಅಕ್ಷರ ಕ್ರಮೀಕರಿಸಿ ಪದ ರಚಿಸಿರಿ, ಆಶಯ ಬರೆಯಿರಿ, ಆಸ್ವಾದನ ಟಿಪ್ಪಣಿ, ಒಗಟು ಬಿಡಿಸಿರಿ, ವಿಂಗಡಿಸಿ ಬರೆಯಿರಿ, ಬಹುವಚನ, ಕ್ರಮೀಕರಿಸಿರಿ |
| ಪಠ್ಯ ಪುಸ್ತಕ | ಪ್ರವೇಶ ಚಟುವಟಿಕೆ, ಬಿಟ್ಟ ಅಕ್ಷರ ತುಂಬಿಸುವುದು, ಹುಡುಕಿ ಬರೆಯುವ, ಪ್ರಾಸಪದ, ಆಶಯ ಬರೆಯಿರಿ |
| ಆಡಿಯೋ | ತೋಟದ ಪಾಠ ಧ್ವನಿಸುರುಳಿ |
| ಪೋರ್ಟ್ ಫೋಲಿಯೊ | ಎಲ್ಲಾ ರಚನೆಗಳು, ಘೋಷಣ ವಾಕ್ಯಗಳು |

# ತೆನೆ ಹಬ್ಬ

ಸೆಪ್ಟೆಂಬರ್ ತಿಂಗಳು ಮಳೆಗಾಲದ ಕೊನೆಯ ತಿಂಗಳಾಗಿದೆ. ಈ ಸಮಯದಲ್ಲಿ ಪ್ರಕೃತಿಯು ಹಚ್ಚ ಹಸಿರಾಗಿ ಕಂಗೊಳಿಸುತ್ತಿರುವುದು. ಬೆಳೆ ಹುಲುಸಾಗಿ ಬೆಳೆದು ನಳನಳಿಸಿ ಕೊಯ್ಲಿಗೆ ಸಿದ್ಧವಾಗಿರುವುದು. ಪ್ರಕೃತಿಯ ಈ ಕೊಡುಗೆಗೆ ಕೃತಜ್ಞತೆ ಸಲ್ಲಿಸಲು ವಿವಿಧ ಆಚರಣೆಗಳು ನಡೆಯುತ್ತವೆ. ಈ ಆಚರಣೆಗಳ ಮೂಲಕ ಪ್ರಕೃತಿಮಾತೆಯನ್ನು ವಿಶಿಷ್ಟ ರೀತಿಯಲ್ಲಿ ವಂದಿಸಲಾಗುವುದು. ತೆನೆಹಬ್ಬ ಎಂಬುವುದು ಕೃಷಿಗೆ ಸಂಬಂಧಿಸಿದ ಒಂದು ಆಚರಣೆಯಾಗಿದೆ.



ಕ್ರೈಸ್ತ ಪ್ರಧಾನವಾದ ಈ ಹಬ್ಬವನ್ನು ಸೆಪ್ಟೆಂಬರ್ 8 ರಂದು ಆಚರಿಸಲಾಗುವುದು. ಮೇರಿ ಮಾತೆಯ ಜನ್ಮದಿನದಂದು ಆಚರಿಸಲಾಗುವ ಈ ಹಬ್ಬದ ದಿನ ಇಗರ್ಜಿಗಳಲ್ಲಿ ಹೊಸತೆನೆಯ ಆಶೀರ್ವಚನ, ಬಲಿಪೂಜೆ, ಶುಭಾಶಯ ವಿನಿಮಯ, ಸಿಹಿತಿಂಡಿ, ಭತ್ತದ ತೆನೆ ಹಾಗೂ ಕಬ್ಬು ವಿತರಣೆ ಮೊದಲಾದ ಕಾರ್ಯಕ್ರಮಗಳು ಜರಗುವುದು. ಮನೆಯಲ್ಲಿ ಕನಿಷ್ಟ ಐದು ಬಗೆಯ ಸಸ್ಯಾಹಾರ ಪದಾರ್ಥಗಳನ್ನು ತಯಾರು ಮಾಡುತ್ತಾರೆ. ಅದರಲ್ಲೂ ಕೆಸುವಿನ ದಂಟು, ಹರಿವೆ ದಂಟು, ಹೀರೆ, ಬೆಂಡೆ ಮೊದಲಾದ ತರಕಾರಿಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಾರೆ. ಈ ರೀತಿಯಾಗಿ ಕೃಷಿಗೆ ಸಂಬಂಧಿಸಿದ ಹಬ್ಬಗಳ ಆಚರಣೆಯು ಪ್ರಕೃತಿ ಮತ್ತು ಮನುಜನ ಬಾಂಧವ್ಯವನ್ನು ಸೂಚಿಸುವುದು.

## ಬಿಟ್ಟ ಅಕ್ಷರವನ್ನು ತುಂಬಿಸಿರಿ

| | | | | |
|---|---|---|---|---|
| ಆ | | ರ್ವ | ಚ | |

| | | |
|---|---|---|
| ಬಾಂ | | ವ್ಯ |

| | | | |
|---|---|---|---|
| | ನೆ | ಹ | |

| | | | | |
|---|---|---|---|---|
| ಪ್ರ | | ತಿ | ಮಾ | |

| | | | |
|---|---|---|---|
| ಶು | ಭಾ | | |

ST-491-3-KANNADA-3-VOL-1

## ಕೆಳಗೆ ನೀಡಿರುವ ಪದಗಳನ್ನು ವಿಂಗಡಿಸಿ ಬರೆಯಿರಿ

- ಸಸ್ಯಾಹಾರ - ........ + ..........
- ಮಳೆಗಾಲ - ......... + ..........
- ರೀತಿಯಾಗಿ - ......... + ........
- ಶುಭಾಶಯ - ......... + ..........
- ಕಂಗೊಳಿಸುತ್ತಿರುತ್ತದೆ - ......... + ..........

## ಕೆಳಗೆ ನೀಡಿರುವ ಪದಗಳಿಗೆ ಬಹುವಚನ ಪದವನ್ನು ಬರೆಯಿರಿ

| | | | |
|---|---|---|---|
| ತೆನೆ | - ತೆನೆಗಳು | ಪದಾರ್ಥ | - ............ |
| ಆಚರಣೆ | - ............. | ತಿಂಗಳು | - ............. |
| ಹಬ್ಬ | - ............ | ಬೆಳೆ | - ............. |



**ಕೃಷಿ ಹಬ್ಬಗಳು ಇತರ ರಾಜ್ಯಗಳಲ್ಲಿ**

ತಮಿಳುನಾಡು - ಪೊಂಗಲ್
ಪಂಜಾಬ್ - ಬೈಸಾಖಿ
ಕರ್ನಾಟಕ - ಸಂಕ್ರಾಂತಿ
ಕೇರಳ - ಓಣಂ
ಅಸ್ಸಾಂ - ಬಿಹು

# 3 ಸಂಸ್ಕೃತಿ ಸುಧೆ

ಭಾರತವು ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿರುವ ದೇಶವಾಗಿದೆ. ಉಡುಗೆ ತೊಡುಗೆ, ಹಬ್ಬಗಳು, ಆಚರಣೆಗಳು, ಭಾಷೆಗಳು. ಕಲೆಗಳು ಇವೆಲ್ಲವುಗಳಲ್ಲಿ ಭಾರತೀಯ ಸಂಸ್ಕೃತಿ ಪ್ರಕಟಗೊಳ್ಳುತ್ತದೆ. ನಮ್ಮ ಶ್ರೇಷ್ಠ ಪರಂಪರೆಯನ್ನು ಉಳಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಚಿಕ್ಕಂದಿನಿಂದಲೇ ಭಾರತೀಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನವು ನಡೆಯಬೇಕು. ವಿವಿಧ ಭಾಷಾ ವ್ಯವಹಾರ ರೂಪಗಳನ್ನು ಬಳಸುವ ಮೂಲಕ ಇದನ್ನು ಸಾಧಿಸಬಹುದಾಗಿದೆ.

## ಜೋಡಿಸಿರಿ



# ನವರಾತ್ರಿ

ನವರಾತ್ರಿಯು ದೇವಿಯನ್ನು ಆರಾಧಿಸುವ ಹಿಂದೂ ಧರ್ಮದ ಹಬ್ಬವಾಗಿದೆ. ನವರಾತ್ರಿ ಎಂದರೆ ಒಂಭತ್ತು (ನವ) ರಾತ್ರಿಗಳು ಎಂದು ಅರ್ಥ. ನವರಾತ್ರಿ ಶುಕ್ಲಪಕ್ಷದ ಪಾಡ್ಯದಂದು ಆರಂಭವಾಗಿ ನವಮಿಯವರೆಗೆ ಆಚರಿಸುತ್ತಾರೆ. ದೇವಿಯ ಒಂಭತ್ತು ಅವತಾರಗಳನ್ನು ವಿವಿಧ ರೀತಿಗಳಲ್ಲಿ ಆರಾಧಿಸಲಾಗುವುದು. ದೇವಿಯು ದುಷ್ಟ ರಾಕ್ಷಸರನ್ನು ಸಂಹಾರ ಮಾಡಲು ಬೇರೆಬೇರೆ ಅವತಾರಗಳನ್ನು ತಾಳಿದಳು ಎಂಬ ನಂಬಿಕೆ. ಸಪ್ತಮಿಯಂದು ಅಂದರೆ ಏಳನೇ ದಿನ ದುರ್ಗಾಪೂಜೆ ಮಾಡುತ್ತಾರೆ. ನವರಾತ್ರಿಯಲ್ಲಿ ಈ ದಿನಕ್ಕೆ ವಿಶೇಷ ಸ್ಥಾನವಿದೆ. ಸಪ್ತಮಿಯ ಮೂಲ ನಕ್ಷತ್ರದಂದು ಪುಸ್ತಕ ಮತ್ತು ಪವಿತ್ರ ಗ್ರಂಥಗಳನ್ನು ಪೂಜೆಗೆ ಇಡಲಾಗುವುದು. ನವಮಿಯಂದು ಆಯುಧ ಮತ್ತು ವಾಹನಗಳಿಗೆ ಪೂಜೆ ಮಾಡಲಾಗುವುದು. ನವರಾತ್ರಿಯ ಹತ್ತನೇ ದಿನ





ವಿಜಯದಶಮಿಯಾಗಿದೆ. ಅಂದು ಮಕ್ಕಳಿಗೆ ವಿದ್ಯಾರಂಭವನ್ನು ಮಾಡುವರು. ಹಬ್ಬದ ಸಂದರ್ಭದಲ್ಲಿ ಕೆಲವೆಡೆಗಳಲ್ಲಿ ಮನೋರಂಜನೆಗಾಗಿ ಹುಲಿ, ಸಿಂಹ, ಕರಡಿ ಮೊದಲಾದ ವೇಷಗಳನ್ನು ಧರಿಸಿ ಕುಣಿಯುತ್ತಾ ಮನೆ ಮನೆಗಳಿಗೆ ಭೇಟಿ ನೀಡುತ್ತಾರೆ. ಹತ್ತು ದಿನಗಳ ಹಬ್ಬವು; ಭವ್ಯವಾದ ಮೆರವಣಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪ್ರದರ್ಶನಗಳಂತಹ ಅನೇಕ ವಿಶಿಷ್ಟ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ.


ಭಾರತದ ಬಹುತೇಕ ಭಾಗಗಳಲ್ಲಿ ನವರಾತ್ರಿಯನ್ನು ವೈಭವದಿಂದ ಆಚರಿಸುತ್ತಾರೆ.

# ಈದುಲ್ ಫಿತರ್

ಈದುಲ್ ಫಿತರ್ ಇಸ್ಲಾಂ ಧರ್ಮದವರು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸುವ ಹಬ್ಬವಾಗಿದೆ. ಇದು ಪವಿತ್ರ ರಂಜಾನ್ ತಿಂಗಳ ಕೊನೆಯಲ್ಲಿ ಬರುವುದು. ರಂಜಾನ್ ತಿಂಗಳಲ್ಲಿ ಉಪವಾಸ ವ್ರತವು ನಡೆಯುವುದು. ಸೂರ್ಯೋದಯಕ್ಕೆ ಮೊದಲು ಆಹಾರ ಸೇವನೆ ಮಾಡಿ ಉಪವಾಸ ವ್ರತ ಆರಂಭಿಸುವ ಇಸ್ಲಾಂ ಧರ್ಮಾವಲಂಬಿಗಳು ಸೂರ್ಯಾಸ್ತಮಾನದ ಬಳಿಕವೇ ಆಹಾರವನ್ನು ಸೇವಿಸುವರು.




ಇಸ್ಲಾಂ ಧರ್ಮದಲ್ಲಿ ರಂಜಾನ್ ತಿಂಗಳಿಗೆ ಬಹಳ ಮಹತ್ವವಿದೆ. ಮುಸಲ್ಮಾನರ ಧರ್ಮಗ್ರಂಥವಾದ ಖುರಾನ್ ಸೃಷ್ಟಿಯಾದ ಪವಿತ್ರ ತಿಂಗಳು ರಂಜಾನ್ ಆಗಿದೆ. ಈ ತಿಂಗಳಿನಲ್ಲಿ ಸತ್ಕರ್ಮಕ್ಕೆ ಉತ್ತಮ ಫಲಗಳನ್ನು ದೇವರು ನೀಡುತ್ತಾರೆ ಎಂಬುದು ಇಸ್ಲಾಂ ಧರ್ಮದ ನಂಬಿಕೆ. ಈದುಲ್ ಫಿತರ್ ಹಬ್ಬದ ಸಂದರ್ಭದಲ್ಲಿ ಶ್ರೀಮಂತರು ಬಡವರಿಗೆ ದಾನ ಧರ್ಮಗಳನ್ನು ಮಾಡುತ್ತಾರೆ. ಇದನ್ನು ಫಿತರ್ ಸಕಾತ್ ಎನ್ನುತ್ತಾರೆ. ರಂಜಾನ್ ಉಪವಾಸದ ಕೊನೆಯಲ್ಲಿ ಈದುಲ್ ಫಿತರ್ ಹಬ್ಬವನ್ನು ಆಚರಿಸಲಾಗುವುದು.



# ಕ್ರಿಸ್‌ಮಸ್

ದೇವಪುತ್ರ ಏಸುಕ್ರಿಸ್ತನು ಹುಟ್ಟಿದ ದಿನವನ್ನು ಕ್ರಿಸ್‌ಮಸ್ ಹಬ್ಬವನ್ನಾಗಿ ಆಚರಿಸಲಾಗುವುದು. ಇಸ್ರೇಲ್‌ನಲ್ಲಿರುವ ಬೆತ್ಲೆಹೆಮ್ ಎಂಬ ಹಳ್ಳಿಯಲ್ಲಿ ಮೇರಿ ಮತ್ತು ಜೋಸೆಫ್ ದಂಪತಿಗಳ ಸುಪುತ್ರನಾಗಿ ಏಸುಕ್ರಿಸ್ತ ಹುಟ್ಟಿದನು. ಪ್ರತಿವರ್ಷ ದಶಂಬರ ತಿಂಗಳ 25 ರಂದು ಕ್ರಿಸ್‌ಮಸ್ ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಅಂದು ಕ್ರೈಸ್ತರು ಇಗರ್ಜಿಗಳಲ್ಲಿ ಒಟ್ಟು ಸೇರುತ್ತಾರೆ. ಧರ್ಮಗುರುಗಳು ಬಲಿಪೂಜೆ ಹಾಗೂ ವಿವಿಧ ಧಾರ್ಮಿಕ ಕ್ರಿಯೆಗಳನ್ನು ನಡೆಸುತ್ತಾರೆ. ಈ ಸಂದರ್ಭದಲ್ಲಿ ಏಸುವಿನ ಜನನದ ಸನ್ನಿವೇಶವನ್ನು ವರ್ಣಿಸುವ ಬೈಬಲಿನ ವಚನಗಳನ್ನು ಪಠಿಸುವುದರೊಂದಿಗೆ ಕ್ರಿಸ್‌ಮಸ್ ಸಂದೇಶವನ್ನು ನೀಡುತ್ತಾರೆ. ಬಾಲಏಸುವಿನ ಜನನವನ್ನು ಕೊಂಡಾಡುತ್ತಾ ನೆರೆದವರೆಲ್ಲರೂ ಕ್ರಿಸ್‌ಮಸ್ ಗೀತೆ (ಕ್ಯಾರೆಲ್ಸ್)ಗಳನ್ನು ಹಾಡುತ್ತಾರೆ. ಬಳಿಕ ಸಂತೋಷದ ಸಂಕೇತವಾಗಿ ಕೇಕನ್ನು ಪರಸ್ಪರ ಹಂಚಿ ತಿನ್ನುತ್ತಾರೆ. ಕ್ರಿಸ್‌ಮಸ್ ಬರುವುದಕ್ಕಿಂತ ಮೊದಲು ಸಾಂತಾಕ್ಲಾಸನು ಮನೆಗಳಿಗೆ ತೆರಳಿ ಕ್ರಿಸ್‌ಮಸ್ ಸಂದೇಶವನ್ನು ನೀಡುತ್ತಾನೆ. ಕ್ರಿಸ್‌ಮಸ್







ಹಬ್ಬ ಬರುವ ಮೊದಲೇ ಮನೆಗಳ ಎದುರು ಗೋದಲಿ ನಿರ್ಮಿಸುತ್ತಾರೆ. ಇದಲ್ಲದೆ ನಕ್ಷತ್ರ ದೀಪಗಳನ್ನಿರಿಸಿ ಕ್ರಿಸ್‌ಮಸ್ ಮರಗಳನ್ನು ಶೃಂಗರಿಸುತ್ತಾರೆ. ಕ್ರಿಸ್‌ಮಸ್ ದಿನದಂದು ಬಂಧು ಮಿತ್ರಾದಿಗಳು ಕ್ರಿಸ್‌ಮಸ್ ಹಬ್ಬದ ಮನೆಯ ಹಿರಿಯರು ತಮ್ಮ ಮಕ್ಕಳಿಗೆ ಆಕರ್ಷಕ ಉಡುಗೊರೆಗಳನ್ನು ಕೊಡುತ್ತಾರೆ. ಮನೆಯವರೆಲ್ಲ ಒಟ್ಟು ಸೇರಿ ಔತಣವನ್ನು ಸವಿಯುತ್ತಾರೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಸಪ್ತಮಿಯ ದಿನದಂದು ನವರಾತ್ರಿಯನ್ನು ಯಾವ ರೀತಿಯಲ್ಲಿ ಆಚರಿಸಲಾಗುವುದು?
2. ನವರಾತ್ರಿ ಹಬ್ಬದ ಸಂದರ್ಭದಲ್ಲಿ ಮನೋರಂಜನೆಗಾಗಿ ಯಾವೆಲ್ಲ ಕಾರ್ಯಕ್ರಮಗಳನ್ನು ಮಾಡುತ್ತಾರೆ?
3. ರಂಜಾನ್ ಹಬ್ಬವನ್ನು ಹೇಗೆ ಆಚರಿಸುತ್ತಾರೆ?
4. ಫಿತರ್ ಸಕಾತ್ ಎಂದರೇನು?
5. ಕ್ರಿಸ್‌ಮಸ್ ಹಬ್ಬವನ್ನು ಯಾವಾಗ ಆಚರಿಸುತ್ತಾರೆ?
6. ಮನೆಗಳಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಹೇಗೆ ಆಚರಿಸುತ್ತಾರೆ?

## ಪದವಿಂಗಡಣೆ

- ಹಬ್ಬವಾಗಿದೆ = ........................ + .........................
- ಪಠಿಸುವುದರೊಂದಿಗೆ = ........................ + .........................
- ಸೂರ್ಯೋದಯ = ........................ + .........................
- ಧರ್ಮಾವಲಂಬಿಗಳು = ........................ + .........................
- ದೇವಾಲಯ = ........................ + .........................

## ಪದ್ಯ ಮುಂದುವರಿಸುವ

ಪಟ ಪಟ ಸಿಡಿಯುವ ಪಟಾಕಿಗಳು

ಸುರ್ ಸುರ್ ಎನ್ನುವ ದುರುಸುಗಳು

ಸರಸರ ತಿರುಗುವ ನೆಲಚಕ್ರಗಳು

ಹರುಷದಿ ಕುಣಿಯುವ ಪುಟಾಣಿ ಮಕ್ಕಳು

.......................................................

.......................................................

.......................................................

.......................................................

.......................................................

.......................................................

.......................................................

.......................................................

## ಶುಭಾಶಯ ಪತ್ರ ರಚಿಸಿರಿ

ಹಬ್ಬದ ಸಂದರ್ಭದಲ್ಲಿ ನಿಮ್ಮ ಗೆಳೆಯ ಅಥವಾ ಗೆಳತಿಗೆ ಶುಭಾಶಯವನ್ನು ತಿಳಿಸಲು ಒಂದು 'ಶುಭಾಶಯ ಪತ್ರ' ವನ್ನು ರಚಿಸಿರಿ.

ಪ್ರೀತಿಯ ಅರುಣ,

ನಿನಗೆ

**ಹುಟ್ಟುಹಬ್ಬದ ಶುಭಾಶಯಗಳು**

ಇತೀ

**ಜಾನ್**

### ರಾಷ್ಟ್ರೀಯ ಹಬ್ಬಗಳು

ಸ್ವಾತಂತ್ರ್ಯ ದಿನ, ಗಾಂಧಿ ಜಯಂತಿ,
ಗಣರಾಜ್ಯೋತ್ಸವ.



## ಹುಡುಕಿ ಬರೆಯುವ

ಕೆಳಗೆ ನೀಡಲಾದ ಕೋಣೆಗಳಲ್ಲಿ ಹಬ್ಬದ ಹೆಸರುಗಳು ಅಡಗಿವೆ. ಅವುಗಳನ್ನು ಹುಡುಕಿ ಬರೆಯಿರಿ.

| | | | | | | | |
|---|---|---|---|---|---|---|---|
| ಈ | ಸ್ಟ | ರ್ | ಓ | ಣಂ | ವೈ | ಶಾ | ಖಿ |
| ನ | ಗು | ಣ | ಬು | ದ್ಧ | ಪೂ | ರ್ಣಿ | ಮ |
| ವ | ಡ್ | ಮಿ | ಯು | ದೀ | ಈ | ಲ | ಹಾ |
| ರಾ | ಫ್ರೈ | ಚ | ಗಾ | ಪಾ | ದ್ | ಕ್ರಿ | ವೀ |
| ತ್ರಿ | ಡೆ | ಪಂ | ದಿ | ವ | ಮಿ | ಸ್ | ರ |
| ಮೊ | ಹ | ರ | ಮ್ | ಳಿ | ಲಾ | ಮ | ಜ |
| ವಿ | ಷು | ಗ | ಬ | ಕ್ರೀ | ದ್ | ಸ್ | ಯಂ |
| ಗು | ರು | ನಾ | ನ | ಕ | ಜ | ಯಂ | ತಿ |

..........................................  ..........................................

..........................................  ..........................................


..........................................  ..........................................

..........................................  ..........................................

## ಈ ಪದ್ಯವನ್ನು ರಾಗವಾಗಿ ಹಾಡಿರಿ

ಗರಿ ಗರಿ ಚಕ್ಕುಲಿ
ಕುರು ಕುರು ಚಕ್ಕುಲಿ
ತಿನ್ನುವ ನಾವು ಬನ್ನಿರೊ ।
ಅಕ್ಕನು ಮಾಡಿದ
ಸುತ್ತಿನ ಚಕ್ಕುಲಿ
ಉರುಟುರುಟಾಗಿದೆ ನೋಡೀರೆ ।
ಸುಳಿ ಸುಳಿಯಾಗಿ
ಚಕ್ಕುಲಿ ಸುತ್ತಿ
ಎಣ್ಣೆಗೆ ಬಿಡುವಳು ನಮ್ಮಕ್ಕ ।
ಸುಂಯ್ ಸುಂಯ್ ಎಂದು
ಸದ್ದನು ಮಾಡುತ
ಕೆಂಪಗೆ ಕಾದಿತು ಅದು ಪಕ್ಕ ।
ಅಣ್ಣನು ಬಂದ
ತಮ್ಮನು ಬಂದ
ಎಲ್ಲರು ಕುಳಿತೆವು ಸುತ್ತಿನಲಿ ।
ತಟ್ಟೆಯ ತುಂಬ
ಚಕ್ಕುಲಿ ತುಂಬಿ
ಅಕ್ಕನು ಇಟ್ಟಳು ಎದುರಲ್ಲಿ ।
ಬಿಸಿ ಬಿಸಿ ಕಾಫಿ
ಜತೆಯಲೆ ಬಂದಿತು
ಅಮ್ಮನು ತಂದಳು ಒಳಗಿಂದ ।
ಸೇರುತ ತಿಂದೆವು
ಕೂಡುತ ಕುಡಿದೆವು
ಖುಷಿಯದು ತುಂಬಿದ ಆನಂದ ।

- ಬಿ. ಸತ್ಯವತಿ ಎಸ್. ಭಟ್, ಕೊಳಚಪ್ಪು



## ಬಣ್ಣ ಹಚ್ಚಿರಿ



# ಪಾರ್ತಿಸುಬ್ಬ



ನಮ್ಮ ಕಾಸರಗೋಡಿದು
ಯಕ್ಷಗಾನದ ಬೀಡಿದು
ಪಾರ್ತಿಸುಬ್ಬನು ಬಾಳಿ ಬದುಕಿದ
ಹಾಡಿ ಕುಣಿಸಿದ ನಾಡಿದು

ಯಕ್ಷಗಾನವು ಕನ್ನಡ ನಾಡಿನ ವಿಶಿಷ್ಟ ಜನಪದ ಕಲೆಯಾಗಿದೆ. ಯಕ್ಷಗಾನಕ್ಕೆ ವೇಷ ಭೂಷಣಗಳನ್ನು ಅಳವಡಿಸಿ ರಂಗಸಜ್ಜಿಕೆ ಮಾಡಿ ಒಂದು ಕಲೆಯಾಗಿ ರೂಪಿಸಿದವನು ಕುಂಬಳೆಯ ಪಾರ್ತಿಸುಬ್ಬ. ಪಾರ್ತಿಸುಬ್ಬನು ತೆಂಕು ತಿಟ್ಟಿನ ಯಕ್ಷಗಾನ ಕಲೆಯ ಪಿತಾಮಹನಾಗಿದ್ದಾನೆ. ಕುಂಬಳೆಯು ಪಾರ್ತಿಸುಬ್ಬನ ಜನ್ಮಸ್ಥಳವಾಗಿದೆ. ಪಾರ್ವತಿ ಎಂದು ಅವನ ತಾಯಿಯ ಹೆಸರಾಗಿತ್ತು. ಪಾರ್ವತಿಯನ್ನು 'ಪಾರ್ತಿ' ಎಂದು ಕರೆಯುತ್ತಿದ್ದರು. ಪಾರ್ತಿಯ ಮಗ ಸುಬ್ಬ. ಹಾಗೆ ಪಾರ್ತಿಯ ಮಗನು ಪಾರ್ತಿಸುಬ್ಬ ಎಂದು ಕರೆಯಲ್ಪಟ್ಟನು. ಸಭಾ ಲಕ್ಷಣ ಎಂಬ ಕೃತಿಯನ್ನು ಪಾರ್ತಿಸುಬ್ಬನು ರಚಿಸಿದನು. ಇದು ಯಕ್ಷಗಾನದ ಶಾಸ್ತ್ರೀಯ ಕೃತಿಯೆಂದು ಕರೆಯಲ್ಪಟ್ಟಿತು. ಚೌಕಿ ಪೂಜೆ, ಭಾಗವತರ ಲಕ್ಷಣ, ರಂಗಸ್ಥಳದ ವಿವರ, ಕೋಡಂಗಿ ವೇಷ, ಭಾಗವತ-ಕೋಡಂಗಿ ಸಂಭಾಷಣೆ, ಷಣ್ಮುಖ ವೇಷ, ಸ್ತ್ರೀ ವೇಷ, ಹಾಸ್ಯಗಾರ ಇತ್ಯಾದಿ ಪಾತ್ರಗಳ ಪರಿಚಯವನ್ನು ಮಾಡಿದ್ದಾನೆ. ಸಂಪೂರ್ಣ ರಾಮಾಯಣ ಕಥಾ ಪ್ರಸಂಗಗಳನ್ನು ರಚಿಸಿ ಯಕ್ಷಗಾನದ ವಾಲ್ಮೀಕಿಯೆಂದು ಖ್ಯಾತಿ ಪಡೆದಿರುವನು.

## ಚಟುವಟಿಕೆಗಳು

### ಉತ್ತರಿಸಿರಿ

1. ಪಾರ್ತಿಸುಬ್ಬನಿಗೆ ಆ ಹೆಸರು ಹೇಗೆ ಬಂತು?
2. ಪಾರ್ತಿಸುಬ್ಬನ ಹುಟ್ಟೂರು ಯಾವುದು?
3. ಪಾರ್ತಿಸುಬ್ಬನನ್ನು ಯಕ್ಷಗಾನದ ವಾಲ್ಮೀಕಿ ಎಂದು ಯಾಕೆ ಕರೆಯುತ್ತಾರೆ?

### ಸರಿಯಾದ ಪದವನ್ನು ಆರಿಸಿರಿ

- ವಿಶಿಷ್ಟ, ವಿಶಿಷ್ಠ, ವಿಸಿಷ್ಟ
- ರಂಗಸ್ತಳ, ರಂಗಸ್ಥಳ, ರಂಗಸ್ಥಲ
- ಯಕ್ಷಗಾಣ, ಯಕ್ಷಗನ, ಯಕ್ಷಗಾನ
- ವೇಶ ಭೂಷಣ, ವೇಷ ಭೂಶನ, ವೇಷ ಭೂಷಣ
- ಶಾಸ್ತ್ರೀಯ,ಶಾಸ್ರಿಯ, ಶಸ್ರೀಯ

### ಮಾದರಿ : ಆಮಂತ್ರಣ ಪತ್ರಿಕೆ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ

ಕುದ್ದೂರು

**ಸ್ವಾತಂತ್ರ್ಯ ದಿನಾಚರಣೆ**

ಮಾನ್ಯರೆ,

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುದ್ದೂರಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಪ್ರತೀ ವರ್ಷದಂತೆ ಆಗಸ್ಟ್ ತಿಂಗಳ 15 ರಂದು ವಿಜೃಂಭಣೆಯಿಂದ ನಡೆಯಲಿರುವುದು.

ಇತೀ,

ಮುಖ್ಯೋಪಾಧ್ಯಾಯರು

ದಿನಾಂಕ : ಸ.ಹಿ.ಪ್ರಾ. ಶಾಲೆ, ಕುದ್ದೂರು

### ಆಮಂತ್ರಣ ಪತ್ರಿಕೆ

ನಿಮ್ಮ ಶಾಲೆಯಲ್ಲಿ ಒಂದು ನಾಟಕ ಪ್ರದರ್ಶನ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಎಲ್ಲರನ್ನೂ ಕರೆಯುವುದಕ್ಕಾಗಿ ಒಂದು ಆಮಂತ್ರಣ ಪತ್ರಿಕೆಯನ್ನು ಬರೆಯಿರಿ.



# ಆಟಿಕಳಂಜ

ಕುಣಿಯುತ ಬರುವನು ಆಟಿಕಳಂಜ
ಕೆಂಬಣ್ಣದ ಕುಪ್ಪಸವನು ತೊಟ್ಟು
ಎಳೆ ಮಡಲಿನ ಹೊಸ ಲಂಗವನುಟ್ಟು
ತಲೆಮಣಿ ಧರಿಸುತ ಕೂದಲು ಬಿಟ್ಟು
ಓಲೆಯ ಸತ್ತಿಗೆ ಎಡಕೈಯಲ್ಲಿ
ಲೊಕ್ಕಿಯ ಸೊಪ್ಪದು ಬಲಗೈಯಲ್ಲಿ
ಗರಗರ ಗಗ್ಗರ ಕಾಲುಗಳಲ್ಲಿ
ಕೇಪುಳ ದಂಡೆಯು ಮೈ ಕೈಯಲ್ಲಿ
ಹರಿದಳದರಸಿನ ರಂಗನು ಮುಖಕೆ
ಪೂಸಿಹನವನು ಮೇಲ್ ಮತ್ತದಕೆ
ಕರಿ ಚುಕ್ಕಿಯನಿಟ್ಟಿರುವನು ತಾನು
ಸುಂದರ ರಾವಣನಿವನೇ ಏನು


## ಪದ್ಯವನ್ನು ರಾಗವಾಗಿ ಹಾಡಿರಿ

## ಚಿತ್ರ ಪ್ರದರ್ಶನ

ಯಕ್ಷಗಾನದ ಚಿತ್ರಗಳನ್ನು ಸಂಗ್ರಹಿಸಿ ತರಗತಿಯಲ್ಲೊಂದು ಚಿತ್ರ ಪ್ರದರ್ಶನ ಏರ್ಪಡಿಸಿರಿ.



# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಉತ್ತರಿಸಿರಿ, ಪದವಿಂಗಡಣೆ, ಹಬ್ಬದ ವಿವರಣೆ, ಚರ್ಚೆ, ಪದ್ಯ ಮುಂದುವರಿಸಿರಿ., ಶುಭಾಶಯ ಪತ್ರ, ಹುಡುಕಿ ಬರೆಯುವ, ಆಲ್ಬಂ ತಯಾರಿ, ಪದ ಆರಿಸಿರಿ. |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಪದ್ಯ ಪೂರ್ತಿಗೊಳಿಸುವುದು, ಪದ ಸರಿಪಡಿಸುವುದು, ಜೋಡಿಸಿ ಬರೆಯಿರಿ |
| ಆಡಿಯೋ | ಚಕ್ಕುಲಿ ಮತ್ತು ಆಟಿಕಳಂಜ |
| ಪೋರ್ಟ್ ಪೋಲಿಯೊ | ಎಲ್ಲಾ ರಚನೆಗಳು |
| ಭಿತ್ತಿಪತ್ರಿಕೆ | ರಚನೆಗಳು |
| ವೀಡಿಯೋ | ನವರಾತ್ರಿ, ಕ್ರಿಸ್ ಮಸ್, ಈದುಲ್ ಫಿತರ್‌ಗೆ ಸಂಬಂಧಿಸಿದ ವೀಡಿಯೋ |
| ಬಾಲಸಭೆ | ಪಾಠಭಾಗದಲ್ಲಿರುವ ಪದ್ಯಗಳು |

# 4 ದಾರಿದೀಪ

ಮೌಲ್ಯ ಶಿಕ್ಷಣವು ಯಾವುದೇ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರಬೇಕು. ಮೌಲ್ಯ ಶಿಕ್ಷಣದ ಮೂಲಕ ವಿದ್ಯಾರ್ಥಿಗಳು ನೈತಿಕ ಮೌಲ್ಯಗಳನ್ನು ಗಳಿಸುವುದರಿಂದಾಗಿ ಅವರು ಆದರ್ಶ, ಸಾಮಾಜಿಕ ನಾಗರಿಕರಾಗಿ ರೂಪುಗೊಳ್ಳುತ್ತಾರೆ. ಪ್ರಾಮಾಣಿಕತೆ, ಸಮಗ್ರತೆ, ಪರಸ್ಪರ ಗೌರವ, ಸಹಾನುಭೂತಿ ಮುಂತಾದ ಅಂಶಗಳು ತರಗತಿಯಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳ ಮೂಲಕ ಮಗುವಿಗೆ ಲಭಿಸಬೇಕಾಗಿದೆ.

## ಕ್ರಮೀಕರಿಸಿರಿ




# ಆಪತ್ತಿಗಾದವನೇ ಗೆಳೆಯ

ಅಂದು ಓಣಂ ಪರೀಕ್ಷೆಯ ಕೊನೆಯ ದಿನವಾಗಿತ್ತು. ಮೂರನೇ ತರಗತಿಯ ರಾಜೇಶ್, ಅಬ್ದುಲ್ಲ, ಪಿಂಟೋ ಮತ್ತು ಹರೀಶ್ ಬೇಗ ಬೇಗನೆ ಪರೀಕ್ಷೆ ಮುಗಿಸಿಕೊಂಡು ಹತ್ತಿರದಲ್ಲಿ ಹರಿಯುತ್ತಿದ್ದ ನದಿಯಲ್ಲಿ ಈಜುವುದಕ್ಕಾಗಿ ಓಡಿದರು. ಹೊಳೆಯು ತುಂಬಿ ಹರಿಯುತ್ತಿತ್ತು. ಈ ಮಕ್ಕಳು ನದಿಯ ಸಮೀಪದಲ್ಲೇ ವಾಸಿಸುವವರಾದುದರಿಂದ ಅವರಿಗೆ ಚೆನ್ನಾಗಿ ಈಜಲು ಬರುತಿತ್ತು. ಅವರು ಹೊಳೆಯ ಸಮೀಪ ತಲುಪಿದರು. ಎಲ್ಲರೂ ಹೊಳೆಗೆ ಧುಮುಕಿದರು, ಸ್ನಾನ ಮಾಡಿದರು, ಈಜಿದರು, ನೀರಿನಲ್ಲಿ ಆಟವಾಡಿದರು. ಪಕ್ಕನೆ ಹರೀಶನು ನೀರಿನ ಸುಳಿಯಲ್ಲಿ ಸಿಲುಕಿಕೊಂಡನು. ಅವನಿಗೆ ಈಜಿ ದಡ ಸೇರಲು ಸಾಧ್ಯವಾಗಲಿಲ್ಲ. ಆತ ಎರಡು ಕೈಗಳನ್ನು ಮೇಲೆತ್ತಿ "ಕಾಪಾಡಿ... ಕಾಪಾಡಿ..." ಎಂದು ಕೂಗತೊಡಗಿದನು. ಉಳಿದವರಿಗೆ ಹೆದರಿಕೆ ಆಯಿತು.

ಅವರು ಏನು ಮಾಡಬೇಕೆಂದು ತಿಳಿಯದೆ ಎದ್ದು ಬಿದ್ದು ದಡ ಸೇರಿದರು. ಆ ಸಮಯಕ್ಕೆ ಅವರಿಗೆ ಒಂದು ವಾಹನದ ಶಬ್ದ ಕೇಳಿಸಿತು. ಅವರು ಭಯದಿಂದ



ಓಡಿ ಬಂದು ವಾಹನದ ಚಾಲಕನೊಡನೆ ಹರೀಶನು ನೀರಿನಲ್ಲಿ ಮುಳುಗುತ್ತಿರುವ ವಿಷಯವನ್ನು ತಿಳಿಸಿದರು. ಚಾಲಕನು ಹಿಂದೆ ಮುಂದೆ ಯೋಚಿಸದೆ ನದಿಗೆ ಹಾರಿದನು. ಮುಳುಗುತ್ತಿದ್ದ ಬಾಲಕನನ್ನು ಮೇಲೆತ್ತಿ ದಡಕ್ಕೆ ತಂದನು. ಕೂಡಲೇ ಅವನಿಗೆ ಪ್ರಥಮ ಚಿಕಿತ್ಸೆ ನೀಡಿ ತನ್ನ ವಾಹನದಲ್ಲಿ ಆಸ್ಪತ್ರೆಗೆ ತಲುಪಿಸಿದನು. ತಕ್ಕ ಸಮಯಕ್ಕೆ ಆ ಗಾಡಿಯ ಚಾಲಕನು ಅಲ್ಲಿಗೆ ತಲುಪಿದುದರಿಂದ ಮತ್ತು ಆತನಲ್ಲಿ ಇತರರಿಗೆ ಸಹಾಯ ಮಾಡುವ ಮನೋಭಾವ ಇದ್ದುದರಿಂದ ಆ ಬಾಲಕ ಆಪತ್ತಿನಿಂದ ಪಾರಾದನು.



## ಚಟುವಟಿಕೆಗಳು

**ಅಡಿಗೆರೆ ಎಳೆದ ಪದಗಳಿಗೆ ಸಮಾನಾರ್ಥ ಪದವನ್ನು ಪಾಠದಿಂದ ಆಯ್ದು ಬರೆಯಿರಿ.**

1. ನದಿಗೆ ಹಾರಿದರು : ನದಿಗೆ ..................
2. ಮಕ್ಕಳಿಗೆ ಭಯವಾಯಿತು : ಮಕ್ಕಳಿಗೆ ...........ಯಾಯಿತು

**ಅಡಿಗೆರೆ ಎಳೆದ ಪದಕ್ಕೆ ಸಮಾನಾರ್ಥ ಪದವನ್ನು ಸ್ವತಃ ಬರೆಯಿರಿ.**

1. ಸ್ನೇಹಿತರು ಈಜಲು ಹೋದರು : ...........ರು ಈಜಲು ಹೋದರು
2. ಹೊಳೆಯು ತುಂಬಿ ಹರಿಯುತ್ತಿತ್ತು : .............................. ತುಂಬಿ ಹರಿಯುತ್ತಿತ್ತು


**ಸಂಭಾಷಣೆ ಮುಂದುವರಿಸಿರಿ**

ಅಪಾಯದಿಂದ ಪಾರಾದ ಹರೀಶನನ್ನು ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ದಾಖಲಿಸಲಾಯಿತು. ಈ ವಿಷಯವನ್ನು ಹರೀಶನ ಮನೆಯವರಿಗೆ ತಿಳಿಸಲು ಪಿಂಟೋ ಫೋನ್ ಮಾಡಿದನು. ಅವರೊಳಗೆ ನಡೆದ ಸಂಭಾಷಣೆಯನ್ನು ಬರೆಯಿರಿ.

ಪಿಂಟೊ : ಹಲೋ....ಹಲೋ...
ಹರೀಶನ ತಂದೆ : ಹಲೋ... ಯಾರು ಮಾತನಾಡುವುದು?
ಪಿಂಟೊ : ನಾನು ಪಿಂಟೊ, ಹರೀಶನ ಗೆಳೆಯ.
ಹರೀಶನ ತಂದೆ : ..............................................................
ಪಿಂಟೊ : ..............................................................
ಹರೀಶನ ತಂದೆ : ..............................................................
ಪಿಂಟೊ : ..............................................................

# ಬಿಡುಗಡೆಯ ದಾರಿ

ಒಂದು ಊರಿನಲ್ಲಿ ಒಂದು ಆಶ್ರಮವಿತ್ತು. ಅಲ್ಲಿದ್ದ ಒಬ್ಬ ಸನ್ಯಾಸಿಗೆ ಪ್ರಾಣಿ ಪಕ್ಷಿಗಳ ಭಾಷೆ ಗೊತ್ತಿತ್ತು. ಅವನು ಒಂದು ಪಾರಿವಾಳವನ್ನು ಸಾಕಿದ್ದನು. ಅದನ್ನು ಸದಾ ಪಂಜರದೊಳಗೆ ಇಡುತ್ತಿದ್ದನು. ಅದು ಪದೇ ಪದೇ "ನನ್ನನ್ನು ಬಿಡು .... ಬಿಡು...." ಎಂದು ಬೇಡಿಕೊಂಡರೂ ಬಿಡಲೇ ಇಲ್ಲ. ಪಾರಿವಾಳವು ಗೂಡಿನ ಒಳಗೆ ಕೊರಗುತ್ತಿತ್ತು. ಒಮ್ಮೆ ಆ ಸನ್ಯಾಸಿಯು ತೀರ್ಥಯಾತ್ರೆಗೆ ಹೊರಟನು. ಹೊರಡುವ ಮೊದಲು ಪಾರಿವಾಳದ ಬಳಿ "ಯಾತ್ರೆಯಿಂದ ಹಿಂತಿರುಗಿ ಬರುವಾಗ ನಿನಗೆ ಏನು ತರಬೇಕು?" ಎಂದು ಕೇಳಿದನು.



ಪಾರಿವಾಳವು "ನನಗೆ ಏನೂ ಬೇಡ. ದಾರಿಯಲ್ಲಿ ಹೋಗುವಾಗ ಯಾವುದಾದರೂ ಮರದ ಮೇಲೆ ನನ್ನ ಬಳಗ ಕುಳಿತಿರುವುದು ಕಂಡರೆ, ಅವುಗಳ ಬಳಿ ನನ್ನ ಕಥೆಯನ್ನು ಹೇಳು. ಅವುಗಳು ಹೇಳುವ ಉತ್ತರವನ್ನು ನನಗೆ ಹೇಳು" ಎಂದಿತು.

ಸನ್ಯಾಸಿಯು ಯಾತ್ರೆಗೆ ಹೊರಟನು. ಯಾತ್ರೆಯನ್ನು ಮುಗಿಸಿ ಹಿಂತಿರುಗಿ ಬರುವಾಗ ಒಂದು ಮರದ ನೆರಳಿನಲ್ಲಿ ಕುಳಿತು ವಿಶ್ರಾಂತಿ ತೆಗೆದುಕೊಂಡನು. ಆಗ ಆ ಮರದಲ್ಲಿ ತುಂಬಾ ಪಾರಿವಾಳಗಳು ಕುಳಿತಿರುವುದನ್ನು ಸನ್ಯಾಸಿ ಕಂಡನು.

ಆಗ ಸನ್ಯಾಸಿಗೆ ತಾನು ಸಾಕಿದ ಪಾರಿವಾಳದ ಕೋರಿಕೆ ನೆನಪಾಯಿತು. ಆ ವಿಷಯವನ್ನು ಪಾರಿವಾಳಗಳಲ್ಲಿ ಹೇಳಿದನು. ಆಗ ಒಂದು ಪಾರಿವಾಳವು ಮರದ ಮೇಲಿನಿಂದ ಕೆಳಗೆ ಬಿದ್ದು ಪ್ರಾಣ ಬಿಟ್ಟಿತು. " ಇದು ಬಹುಶಃ ನಾನು ಸಾಕಿದ ಪಾರಿವಾಳದ



ಸಂಬಂಧಿಯಾಗಿರಬೇಕು. ವಿಷಯ ತಿಳಿದು ಅತಿಯಾದ ದುಃಖದಿಂದ ಎದೆಯೊಡೆದು ಸತ್ತುಹೋಗಿರಬಹುದು" ಎಂದುಕೊಂಡನು. ಸನ್ಯಾಸಿಯು ತನ್ನ ಆಶ್ರಮಕ್ಕೆ ತಲುಪಿದನು.

ತಾನು ಸಾಕಿದ ಪಾರಿವಾಳದ ಬಳಿ ನಡೆದ ವಿಷಯವನ್ನು ಹೇಳಿದನು. ಕೂಡಲೇ ಪಾರಿವಾಳವು "ಅಯ್ಯೋ... ದೇವರೇ..." ಎಂದು ಕೂಗುತ್ತಾ ಪಂಜರದೊಳಗೆ ಪ್ರಾಣ ಬಿಟ್ಟಿತು. ಅದನ್ನು ಹೊರಗೆ ಎಸೆಯಲು ಸನ್ಯಾಸಿಯು ಪಂಜರದ ಬಾಗಿಲು ತೆರೆದನು. ಪಾರಿವಾಳ ಹಾರಿ ಹೋಗಿ ಎತ್ತರದ ಮರದಲ್ಲಿ ಕುಳಿತು "ಎಲೈ ಮೂರ್ಖ ಸನ್ಯಾಸಿಯೇ, ನಾನು ಸತ್ತಿಲ್ಲ. ಸತ್ತಂತೆ ನಟಿಸಿದೆ. ಆ ಪಾರಿವಾಳವೂ ಸತ್ತಿಲ್ಲ. ಅದು ಮೇಲಿಂದ ಕೆಳಗೆ ಉಸಿರು ಕಟ್ಟಿಕೊಂಡು ಸತ್ತಂತೆ ಬಿದ್ದಿತು, ನಿನ್ನ ಮೂಲಕವೇ ನನಗೆ ಬಿಡುಗಡೆಯ ದಾರಿಯನ್ನು ಹೇಳಿಕೊಟ್ಟಿತು. ನೀನು ಮೋಸ ಹೋದೆ" ಎಂದು ನಗುತ್ತಾ ಹಾರಿ ಹೋಗಿ ತನ್ನ ಬಳಗವನ್ನು ಸೇರಿಕೊಂಡಿತು.

ಪ್ರಾಣಿ ಪಕ್ಷಿಗಳಿಗೆ ಅವುಗಳದ್ದೇ ಆದ ಜೀವನವಿದೆ. ಯಾವ ಜೀವಿಗಳನ್ನೇ ಆಗಲಿ, ಅವುಗಳ ಇಷ್ಟಕ್ಕೆ ವಿರುದ್ಧವಾಗಿ ಬಂಧನದಲ್ಲಿಡುವುದು ತಪ್ಪು. ಯಾರಿಗೂ ನೋವನ್ನು ಕೊಡದೇ ಬದುಕಬೇಕು.

## ಚಟುವಟಿಕೆಗಳು

### ಹೊಂದಿಸಿ ಬರೆಯಿರಿ

| | |
|---|---|
| ಪಾರಿವಾಳ | ನಾಟಕ |
| ಸನ್ಯಾಸಿ | ವಿಶ್ರಾಂತಿ |
| ನೆರಳು | ಪಂಜರ |
| ಪಾರಿವಾಳದ ಸಾವು | ತೀರ್ಥಯಾತ್ರೆ |

### ಉತ್ತರಿಸಿರಿ

1. ಸನ್ಯಾಸಿ ಗೆ ಯಾವ ಭಾಷೆ ಗೊತ್ತಿತ್ತು?
2. ಸನ್ಯಾಸಿಯು ಎಲ್ಲಿಗೆ ಹೊರಟನು?
3. ಸನ್ಯಾಸಿಯು ಹೊರಡುವ ಮೊದಲು ಪಾರಿವಾಳದ ಬಳಿ ಏನು ಕೇಳಿದನು?
4. ಸನ್ಯಾಸಿಯು ಪಂಜರದ ಬಾಗಿಲನ್ನು ಏಕೆ ತೆರೆದನು?





ಮೇಲಿನ ಚಿತ್ರಗಳನ್ನು ನೋಡಿದಾಗ ನಿಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಬರೆಯಿರಿ.

### ಶೌರ್ಯ ಪ್ರಶಸ್ತಿ

ಮುಹಮ್ಮದ್ ಶಮ್ಮದ್ (ಕೇರಳ) - 14 ವರ್ಷ ಪ್ರಾಯ. ತನ್ನ ಪ್ರಾಣವನ್ನು ಲೆಕ್ಕಿಸದೆ ನೀರಿನಲ್ಲಿ ಮುಳುಗುತ್ತಿದ್ದ ಚಿಕ್ಕ ಹುಡುಗಿಯನ್ನು ಕಾಪಾಡಿದನು. ಈತನ ಧೀರತೆಗಾಗಿ ಪ್ರಧಾನಮಂತ್ರಿಯವರ ಶೌರ್ಯ ಪ್ರಶಸ್ತಿ ಲಭಿಸಿತು.



# ಸತ್ಯವಂತ ಮಾದ

ಬಡವ ಮಾದ ಕಷ್ಟ ಜೀವಿ
ಸತ್ಯವಂತನು
ಸೌದೆ ಮಾರಿ ಹೊಟ್ಟೆಯನ್ನು
ಹೊರೆಯುತ್ತಿದ್ದನು

ಒಂದು ದಿವಸ ಬಿಸಿಲ ಝಳಕೆ
ನೀರನರಸುತ
ನಡೆದ ಕೊಳದ ಬಳಿಗೆ ತಣಿದ
ನೀರ ಕುಡಿಯುತ

ಮೇಲೆ ಬರಲು ಹೆಗಲೊಳಿದ್ದ
ಕೊಡಲಿ ಜಾರಿತು
ನೀರಿನಲ್ಲಿ ಬಿದ್ದು ಒಡನೆ
ಕಾಣದಾಯಿತು

ಬಾಳ ಊರುಗೋಲು ಕಳೆದ
ಮಾದ ದುಗುಡದಿ
ಮೊರೆಯ ನಿಟ್ಟ ದೇವರಲ್ಲಿ
ಅಳುತ ವಿನಯದಿ



ದೇವತೆಯು ಬಂದಳಾಗ
ಮಾದನಳಲನು
ತಿಳಿದು ನೆರವ ನೀಡಲೆಂದು
ಕೊಳಕೆ ಇಳಿದಳು

ಮುಳುಗಿ ಹೊಳೆವ ಹೊನ್ನ ಕೊಡಲಿ
ತಂದು ನೀಡಲು
ತನ್ನದಲ್ಲವೆಂದು ಮಾದ
ಹಿಂದೆ ನೀಡಿದ

ಮತ್ತೆ ಕೊಳದಿ ಮುಳುಗಿ ಬೆಳ್ಳಿ
ಕೊಡಲಿ ತಂದಳು
ಬೆಳ್ಳಿ ಕೊಡಲಿ ತನ್ನದಲ್ಲ
ಎಂದ ಮಾದನು

ಕೊನೆಗೆ ಮುಳುಗಿ ಹುಡುಕಿ ತೆಗೆದು
ಕಪ್ಪು ಕೊಡಲಿಯ
ಬೇಗ ಕೈಯ ನೀಡಿ ಮಾದ
ಪಡೆದ ಕೊಡಲಿಯ

(ಸಾಧಾರ)



## ಚಟುವಟಿಕೆಗಳು

### ಪದ್ಯವನ್ನು ರಾಗವಾಗಿ ಹಾಡಿ ಅಭಿನಯಿಸಿರಿ.

### ಜೋಡಿಸಿ ಬರೆಯಿರಿ

- ನೀರನು + ಅರಸುತ -
- ಮಾದನ + ಅಳಲನು -
- ತನ್ನದು + ಅಲ್ಲದೆಂದು -
- ಕಾಣದೆ + ಆಯಿತು -

### ಈ ಕೆಳಗಿನ ಆಶಯಗಳು ಬರುವಂತಹ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

- ಬಡವನಾದ ಮಾದ ಸತ್ಯವಂತನಾಗಿದ್ದನು.
- ಉರಿ ಬಿಸಿಲಿಗೆ ನೀರನ್ನು ಹುಡುಕುತ್ತಾ ಕೊಳದ ಬಳಿಗೆ ನಡೆದನು.
- ಬದುಕಿಗೆ ಆಧಾರವಾಗಿದ್ದ ಕೊಡಲಿಯನ್ನು ಕಳೆದುಕೊಂಡನು.
- ಕಬ್ಬಿಣದ ಕೊಡಲಿಯನ್ನು ನೀಡಿದಾಗ ಮಾದನು ಪಡೆದುಕೊಂಡನು.

### ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ಮಾದನು ಹೇಗೆ ಬದುಕುತ್ತಿದ್ದನು?
2. ಮಾದನ ಕೊಡಲಿಯು ಹೇಗೆ ಕಾಣದಾಯಿತು?
3. ದೇವತೆಯು ಮಾದನಿಗೆ ಹೇಗೆ ಸಹಾಯ ಮಾಡಿದಳು?
4. ದೇವತೆಯು ಯಾವೆಲ್ಲಾ ಕೊಡಲಿಗಳನ್ನು ಮಾದನಿಗೆ ತೋರಿಸಿದಳು?

## ಕ್ರಮೀಕರಿಸಿರಿ

- ಹೆಗಲಲಿ ಇದ್ದ ಕೊಡಲಿ ಜಾರಿ ನೀರಿನಲ್ಲಿ ಬಿದ್ದು ಕಾಣದಾಯಿತು
- ಮಾದನು ಸೌದೆ ಮಾರಿ ಹೊಟ್ಟೆ ತುಂಬಿಸುತ್ತಿದ್ದನು
- ಕೊನೆಗೆ ದೇವತೆಯು ಕಪ್ಪು ಕೊಡಲಿಯನ್ನು ತೆಗೆದುಕೊಟ್ಟಳು
- ಮಾದನ ದುಃಖವನ್ನು ಕಂಡು ದೇವತೆಯು ಸಹಾಯಕ್ಕೆ ಬಂದಳು
- ಬೆಳ್ಳಿ ಕೊಡಲಿಯನ್ನು ತೋರಿಸಿದಾಗ ಮಾದನು ಅದನ್ನು ತಿರಸ್ಕರಿಸಿದನು

## ಊಹಿಸಿ ಬರೆಯಿರಿ

ಮಾದನ ಸ್ಥಾನದಲ್ಲಿ ನೀವಾಗಿರುತ್ತಿದ್ದರೆ ಯಾವ ಕೊಡಲಿಯನ್ನು ಆಯ್ಕೆ ಮಾಡುತ್ತಿದ್ದಿರಿ. ಯಾಕೆ?

## ಸಮಾನಾರ್ಥ ಪದಗಳನ್ನು ಪಾಠಭಾಗದಿಂದ ಹುಡುಕಿ ಬರೆಯಿರಿ

ಚಿನ್ನ -

ಕೆರೆ -

ಜಲ -

ಹುಡುಕು -

ದಿನ -

ಕೂಡಲೆ -

ಸಹಾಯ -

## ಅಡಗಿ ಕುಳಿತವರು ಯಾರು?





ಸ ದಾ ಳ ವಾ

ರ್ಯ ತಿ ಸೂ ಕಾಂ

ಲ್ಲಿ ಗೆ ದುಂ ಮ ಡು

ಹೂ ಚೆಂ ವು ಡು

ಕಾಂ ರ ನ ಕ ಬ











# ಸತ್ಯಕ್ಕೆ ಸಂದ ಜಯ

ಹಿಂದೆ ಗಾಂಧಾರ ದೇಶದಲ್ಲಿ ವಿದ್ಯಾಧರನೆಂಬ ಒಬ್ಬ ಸಾಮ್ರಾಟನಿದ್ದನು. ಅವನಿಗೆ ಹೂಗಳೆಂದರೆ ಬಹಳ ಇಷ್ಟ. ಅವನು ಅರಮನೆಯ ತೋಟದಲ್ಲಿ ಬಗೆಬಗೆಯ ಹೂಗಿಡಗಳನ್ನು ಬೆಳೆಸುತ್ತಿದ್ದನು. ರಾಜನಿಗೆ ಮಕ್ಕಳಿರಲಿಲ್ಲ. 'ತನ್ನ ರಾಜ್ಯಕ್ಕೆ ಯಾರು ಉತ್ತರಾಧಿಕಾರಿ?' ಎನ್ನುವ ಚಿಂತೆಯು ಸದಾಕಾಲ ಅವನನ್ನು ಕಾಡುತ್ತಿತ್ತು. ಒಂದು ದಿನ ರಾಜನಾದ ವಿದ್ಯಾಧರನು ಊರಿನಲ್ಲಿ ಡಂಗುರ ಸಾರಿಸಿದನು.

"ನಾನು ಎಲ್ಲ ಮಕ್ಕಳಿಗೂ ವಿಧವಿಧವಾದ ಹೂವಿನ ಬೀಜಗಳನ್ನು ಕೊಡುತ್ತೇನೆ, ಆರು ತಿಂಗಳಲ್ಲಿ ಅವುಗಳನ್ನು ಅವರು ಬೆಳೆಸಿ ತೋರಿಸಬೇಕು. ಯಾರು ಚೆನ್ನಾಗಿ ಬೆಳೆಸುತ್ತಾರೋ ಅವರನ್ನು ನಾನು ದತ್ತು ತೆಗೆದುಕೊಳ್ಳುತ್ತೇನೆ. ಆ ಮಗುವೇ ಮುಂದೆ ಈ ರಾಜ್ಯಕ್ಕೆ ರಾಜನಾಗುತ್ತಾನೆ."

ಅರಮನೆಯ ಆವರಣದಲ್ಲಿ ಗದ್ದಲವೋ ಗದ್ದಲ. ಸಾವಿರಾರು ಮಕ್ಕಳೂ ಅವರ ಪಾಲಕರೂ ಬಂದು ಸೇರಿದರು. ಅವರಲ್ಲಿ ಪಿಂಗಳನೂ ಒಬ್ಬ. ಅವನಿಗೂ ರಾಜನಂತೆ ಹೂಗಿಡಗಳನ್ನು ಬೆಳೆಸುವ ಹವ್ಯಾಸವಿತ್ತು. ಅವನ ತೋಟದಲ್ಲಿ ಅನೇಕ ಗಿಡಗಳನ್ನು ತನ್ನ ಗೆಳೆಯರಂತೆ ಸಾಕಿದ್ದನು.

ರಾಜನು ಎಲ್ಲರಿಗೂ ಬೀಜಗಳನ್ನು ಹಂಚಿದನು. ಎಲ್ಲಾ ಪಾಲಕರಿಗೂ ತಮ್ಮ ಮಗ ರಾಜನಾಗಬೇಕೆಂಬ ಮಹದಾಸೆ ಇತ್ತು. ಹೀಗಾಗಿ ಅವರೂ ಮಕ್ಕಳೊಂದಿಗೆ ಗಿಡವನ್ನು ಬೆಳೆಸುವ ಕಾರ್ಯದಲ್ಲಿ ಸೇರಿಕೊಂಡರು.

ಪಿಂಗಳನು ಹೂವಿನ ಕುಂಡದಲ್ಲಿ ಮಣ್ಣು, ಗೊಬ್ಬರ ಹಾಕಿ, ಬೀಜಗಳನ್ನು ಬಿತ್ತಿದನು. ಪ್ರತಿದಿನ ತಪ್ಪದೇ ನೀರು ಎರೆದನು. ಒಂದೆರಡು ತಿಂಗಳುಗಳು ಕಳೆದುವು. ಆದರೆ ಬೀಜವು ಮೊಳಕೆ ಬರಲೇ ಇಲ್ಲ. ಉಳಿದ ಮಕ್ಕಳ ಹೂಕುಂಡಗಳಲ್ಲಿ ಬೀಜ ಮೊಳೆತು ಗಿಡವಾಯಿತು. ಪಿಂಗಳನಿಗೆ ಚಿಂತೆಯಾಯಿತು. ಆತ ಸಣ್ಣ ಕುಂಡದಿಂದ ದೊಡ್ಡ ಕುಂಡಕ್ಕೆ ಬೀಜಗಳನ್ನು ಬದಲಾಯಿಸಿದನು. ಆದರೂ ಬೀಜ ಮೊಳಕೆ ಒಡೆಯಲೇ ಇಲ್ಲ.

ರಾಜನು ಹೇಳಿದ ಆ ದಿನವು ಬಂದಿತು. ಮಕ್ಕಳೆಲ್ಲಾ ಅಂದವಾದ ಉಡುಪುಗಳನ್ನು ಧರಿಸಿ, ದೊಡ್ಡ ದೊಡ್ಡ ಗಿಡಗಳಿರುವ ಹೂಕುಂಡಗಳೊಂದಿಗೆ ಅರಮನೆಯ ಮುಂದೆ ಸೇರಿದರು.

ಪಿಂಗಳನಿಗೆ ಅರಮನೆಗೆ ಹೋಗಲು ಮನಸೇ ಇರಲಿಲ್ಲ. ಅವನು ಚಿಂತಿತನಾದನು.

ಅವನ ತಂದೆಯು, "ಮಗೂ, ಏನೇ ಆಗಲಿ. ನೀನು ಕುಂಡದೊಂದಿಗೆ ಅರಮನೆಗೆ ಹೋಗು" ಎಂದರು.

“ಅಪ್ಪಾ, ಖಾಲಿ ಕುಂಡದೊಂದಿಗೆ ಹೋಗುವುದಾದರೂ ಹೇಗೆ?” ಎಂದು ಬೇಸರದಿಂದ ಪಿಂಗಳನು ಹೇಳಿದನು.

"ಮಗೂ, ನೀನು ಕಷ್ಟಪಟ್ಟು ಕೆಲಸ ಮಾಡಿದ್ದೀಯಾ.. ಆದರೆ ಬೀಜ ಮೊಳಕೆ ಬರಲಿಲ್ಲ. ಅದಕ್ಕೆ ಬೇಸರಪಟ್ಟು ಪ್ರಯೋಜನವಿಲ್ಲ. ನೀನು ಅರಮನೆಗೆ ಹೋಗು” ಎಂದು ತಂದೆ ಪಿಂಗಳನನ್ನು ಹುರಿದುಂಬಿಸಿದರು. ಪಿಂಗಳ ಕುಂಡವನ್ನು ಹೊತ್ತುಕೊಂಡು ಅರಮನೆಗೆ ಹೋದನು.

ಮಹಾರಾಜ ವಿದ್ಯಾಧರ ಪ್ರತಿಯೊಬ್ಬರ ಹೂವಿನ ಗಿಡಗಳನ್ನೂ ನೋಡುತ್ತಾ ಬಂದನು. ಆದರೆ ಅವನ ಮುಖದಲ್ಲಿ ಸಂತೋಷವೇ ಇರಲಿಲ್ಲ. ಕೊನೆಗೆ ಆತ ಪಿಂಗಳನ ಕುಂಡದ ಹತ್ತಿರ ಬಂದನು.

“ಮಗೂ, ನಾನು ಹೂವಿನ ಗಿಡಗಳ ಸ್ಪರ್ಧೆಗೆ ಕರೆದರೆ ನೀನು ಬರೀ ಕುಂಡವನ್ನು ತಂದಿದ್ದೀಯಲ್ಲಾ?' ಎಂದು ಕೇಳಿದನು.

“ಮಹಾರಾಜರೇ, ನಾನು ನನ್ನ ಪ್ರಯತ್ನವನ್ನು ಶಕ್ತಿ ಮೀರಿ ಮಾಡಿದ್ದೇನೆ. ಆದರೆ ಬೀಜಗಳು ಮೊಳಕೆ ಬರಲಿಲ್ಲ. ಆದರೂ ಸ್ಪರ್ಧೆಗೆ ಬಂದೆ” ಎಂದು ಪಿಂಗಳ ಉತ್ತರಿಸಿದನು. ರಾಜ



ವಿದ್ಯಾಧರ "ಹೌದು, ಈ ಸ್ಪರ್ಧೆಯಲ್ಲಿ ಜಯ ಪಡೆದವನು ನೀನೆ, ಯಾಕೆಂದರೆ ನಾನು ಕೊಟ್ಟ ಬೀಜಗಳೆಲ್ಲಾ ಹುರಿದ ಬೀಜಗಳಾಗಿದ್ದವು. ಎಷ್ಟೊಂದು ಆರೈಕೆ ಮಾಡಿದರೂ ಬೀಜಗಳು ಮೊಳಕೆ ಬರಲಾರವು" ಎಂದು ನಗುತ್ತಾ ಹೇಳಿದನು "ಉಳಿದ ಮಕ್ಕಳು ರಾಜನಾಗಬೇಕೆಂಬ ಆಸೆಯಿಂದ ಬೇರೇ ಬೀಜವನ್ನು ಬಿತ್ತಿ ಹೂಗಿಡಗಳನ್ನು ತಂದರು. ನೀನು ಮಾತ್ರ ಪ್ರಾಮಾಣಿಕತೆಯಿಂದ ವರ್ತಿಸಿರುವೆ. ಆದುದರಿಂದ ರಾಜನಾಗುವ ಅರ್ಹತೆ ನಿನಗೆ ಮಾತ್ರ ಇದೆ" ಎಂದು ರಾಜನು ಹೇಳಿದನು.

ಪಿಂಗಳನ ಮುಖವು ಸಂತೋಷದಿಂದ ಅರಳಿತು.

## ಚಟುವಟಿಕೆಗಳು


### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಊರಲ್ಲಿ ಡಂಗುರ ಹೊರಡಿಸಿದ್ದು ಯಾರು?
2. ರಾಜನು ಮಕ್ಕಳಿಗೆ ಬೀಜಗಳನ್ನು ಕೊಟ್ಟು ಏನೆಂದು ಹೇಳಿದನು?
3. ಪಿಂಗಳನನ್ನು ತಂದೆ ಹೇಗೆ ಹುರಿದುಂಬಿಸಿದರು?
4. ರಾಜನು ಕೊಟ್ಟ ಬೀಜ ಮೊಳಕೆ ಬಾರದಿರಲು ಕಾರಣವೇನು?

### ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂದು ಬರೆಯಿರಿ.

- "ಆ ಮಗುವೇ ಮುಂದೆ ಈ ರಾಜ್ಯಕ್ಕೆ ರಾಜನಾಗುತ್ತಾನೆ".
- ಬರೀ ಕುಂಡದೊಂದಿಗೆ ಹೋದರೆ ಅವಮಾನವಲ್ಲವೇ?
- "ಮಗೂ ನಾನು ಹೂವಿನ ಗಿಡಗಳ ಸ್ಪರ್ಧೆಗೆ ಕರೆದರೆ ನೀನು ಬರೀ ಕುಂಡವನ್ನು ಹೊತ್ತು ತಂದಿದ್ದೀಯಲ್ಲಪ್ಪಾ?"

# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
| --- | --- |
| ನೋಟ್ ಪುಸ್ತಕ | ಕಥೆಯ ನೀತಿ, ಸಮಾನಾರ್ಥ ಪದ, ಪ್ರಶ್ನೆ ತಯಾರಿ, ಸಂಭಾಷಣೆ, ಚರ್ಚೆ, ಮಾದರಿ ಪದ, ಅನುಭವ ಬರೆಯಿರಿ, ಹೊಂದಿಸಿ ಬರೆಯಿರಿ, ಬಿಟ್ಟ ಸ್ಥಳ ತುಂಬಿಸಿ, ಉತ್ತರಿಸಿರಿ, ಭಾವನೆ ಬರೆಯಿರಿ, ಜೋಡಿಸಿರಿ, ಸಾಲುಗಳನ್ನು ಹುಡುಕಿ ಬರೆಯಿರಿ, ಕ್ರಮೀಕರಿಸಿರಿ, ಸಮಾನಾರ್ಥ ಪದ, ಉತ್ತರಿಸಿ, ಯಾರು ಯಾರಿಗೆ ಹೇಳಿದರು, ಊಹಿಸಿ ಬರೆಯಿರಿ. |
| ಪಠ್ಯ ಪುಸ್ತಕ | ಪ್ರವೇಶ ಚಟುವಟಿಕೆ, ಸಮಾನಾರ್ಥ ಪದ, ಸಂಭಾಷಣೆ, ಹೊಂದಿಸಿ ಬರೆಯಿರಿ, ಜೋಡಿಸಿರಿ. |
| ಆಡಿಯೋ | ಸತ್ಯವಂತ ಮಾದ |
| ಪೋರ್ಟ್ ಪೋಲಿಯೊ | ಎಲ್ಲಾ ರಚನೆಗಳು, ಘೋಷಣ ವಾಕ್ಯಗಳು |
| ಭಿತ್ತಿಪತ್ರಿಕೆ | ರಚನೆಗಳು |
| ವೀಡಿಯೋ | ಸತ್ಯವಂತ ಮಾದ |
| ಬಾಲ ಸಭೆ | ನಾಟಕ ಅಭಿನಯ |

# ಪದಕೋಶ

## ಘಟಕ 1 - ಹಸಿರಿನ ಸಿರಿ

| | | |
|---|---|---|
| ಅಚ್ಚುಮೆಚ್ಚು | - | ಇಷ್ಟ |
| ಅಡವಿ | - | ಕಾಡು, ಅರಣ್ಯ, ಕಾನನ, ವನ |
| ಆಗರ | - | ವಾಸಸ್ಥಳ, ಬೀಡು, ವಸತಿ |
| ಆಹ್ವಾನಿಸು | - | ಆಮಂತ್ರಿಸು |
| ಕಂಪು | - | ಪರಿಮಳ |
| ಕಲರವ | - | ಪಕ್ಷಿಗಳ ಚಿಲಿಪಿಲಿ ಧ್ವನಿ |
| ಕಳೆಗುಂದು | - | ಕಾಂತಿಹೀನವಾಗು, ಬಾಡು, ಸೊರಗು |
| ಗಾಯನ | - | ಹಾಡು |
| ಗೋಂದು | - | ಅಂಟು |
| ಜಂತಿ | - | ಮಾಡಿನ ಮುಚ್ಚಿಗೆಗೆ ಆಧಾರವಾದ ತೊಲೆ |
| ತೋಪು | - | ತೋಟ |
| ದಂಡು | - | ಗುಂಪು |
| ನೊಂದುಕೊಳ್ಳು | - | ಬೇಸರಿಸು, ದುಃಖಿಸು |
| ಪತ್ರೆ | - | ಎಲೆ |
| ಬಣಗುಟ್ಟು | - | ಶೂನ್ಯತೆ, ಬರಿದು |
| ಬಲಿತು | - | ಬೆಳೆದು |
| ಮರುಕಗೊಳ್ಳು | - | ದುಃಖಪಡು, ಅನುಕಂಪ ತೋರು |
| ಮಾಲಿಕ | - | ಯಜಮಾನ, ಒಡೆಯ, ಧಣಿ |
| ಸಾಗರ | - | ಸಮುದ್ರ, ಕಡಲು, ಶರಧಿ |
| ಸುಮ | - | ಹೂವು |
| ಸಂಭ್ರಮ | - | ಸಡಗರ, ಉತ್ಸಾಹ, ಉಲ್ಲಾಸ |

| | | |
|---|---|---|
| ಸೊಂಪು | - | ಸಮೃದ್ಧಿ, ಹುಲುಸು |
| ಸ್ಥಾಪಿಸು | - | ನೆಲೆಗೊಳಿಸು |
| ಹಿಂಡು | - | ಗುಂಪು |
| ಹೊನ್ನು | - | ಚಿನ್ನ, ಬಂಗಾರ, ಕನಕ |

**ಘಟಕ 2 - ಉಳುಮೆಯ ಹಿರಿಮೆ**

| | | |
|---|---|---|
| ಅವಲಂಬಿಸು | - | ಆಶ್ರಯಿಸು |
| ಋಣ | - | ಕರ್ತವ್ಯ, ಸಾಲ |
| ಕಳ | - | ಸಾಲು |
| ಕೃತಜ್ಞತೆ | - | ಉಪಕಾರ ಸ್ಮರಣೆ |
| ಕ್ಷೇಮ | - | ಏಳಿಗೆ, ಅಭಿವೃದ್ಧಿ |
| ನಳನಳಿಸು | - | ಹೊಳೆಯು |
| ನಿಂದು | - | ನಿಂತು |
| ಪಾವನ | - | ಸಾರ್ಥಕ, ಪವಿತ್ರ |
| ಪ್ರಾಧಾನ್ಯ | - | ಮಹತ್ವ |
| ಬಾಂಧವ್ಯ | - | ಸಂಬಂಧ, ನಂಟು |
| ಮನುಜ | - | ಮನುಷ್ಯ |
| ಮುದ | - | ಸಂತೋಷ |
| ವಂದಿಸು | - | ನಮಸ್ಕರಿಸು |
| ಶ್ರಮ | - | ಕಷ್ಟ |
| ಸಾರ | - | ಸತ್ವ, ತಿರುಳು |
| ಸಿದ್ಧವಾದ | - | ತಯಾರಾದ |
| ಹೈನುಗಾರಿಕೆ | - | ಪಶುಸಂಗೋಪನೆ |
| ಹೊಲ | - | ಗದ್ದೆ |

## ಘಟಕ 3 - ಸಂಸ್ಕೃತಿ ಸುಧೆ

| | | |
|---|---|---|
| ಆರಾಧಿಸು | - | ಪೂಜಿಸು |
| ಉಡುಗೊರೆ | - | ಬಹುಮಾನ, ಕೊಡುಗೆ |
| ಔತಣ | - | ವಿಶೇಷ ಭೋಜನ |
| ಕೊಂಡಾಡು | - | ಹೊಗಳು, ಗುಣಗಾನ |
| ಖ್ಯಾತ | - | ಪ್ರಸಿದ್ಧ |
| ಗೋದಲಿ | - | ಹಟ್ಟಿ, ದನದ ಕೊಟ್ಟಿಗೆ |
| ಪಠಿಸು | - | ವಾಚಿಸು |
| ಪ್ರಸಂಗ | - | ಕಥಾವಸ್ತು |
| ಮನೋರಂಜನೆ | - | ಸಂತೋಷ |
| ವ್ರತ | - | ಉಪವಾಸ |
| ಶ್ರದ್ಧೆ | - | ಏಕಾಗ್ರತೆ, ಗಮನ |
| ಸಂಕೇತ | - | ಗುರುತು, ಸೂಚನೆ |
| ಸಂಹಾರ | - | ನಾಶ |
| ಸಜ್ಜಿಕೆ | - | ತಯಾರಿ |
| ಸತ್ಕರ್ಮ | - | ಒಳ್ಳೆಯ ಕಾರ್ಯ |
| ಸನ್ನಿವೇಶ | - | ಸಂದರ್ಭ |

## ಘಟಕ 4 - ದಾರಿದೀಪ

| | | |
|---|---|---|
| ಅರಸು | - | ಹುಡುಕು |
| ಅರ್ಹತೆ | - | ಯೋಗ್ಯತೆ |
| ಆಪತ್ತು | - | ಅಪಾಯ |
| ಆರೈಕೆ | - | ಪೋಷಣೆ |
| ಉತ್ತರಾಧಿಕಾರಿ | - | ವಾರಸುದಾರ |

| | | |
|---|---|---|
| ಕೋರಿಕೆ | - | ಬೇಡಿಕೆ |
| ಚಾಲಕ | - | ವಾಹನ ಚಲಾಯಿಸುವವ |
| ದಡ | - | ತೀರ |
| ದುಗುಡ | - | ದುಃಖ, ಬೇಸರ |
| ನೆರವು | - | ಸಹಾಯ |
| ಪಂಜರ | - | ಗೂಡು |
| ಪಾಲಕ | - | ರಕ್ಷಕ |
| ಬಂಧನ | - | ಸೆರೆ |
| ಬಳಗ | - | ಒಕ್ಕೂಟ |
| ಬಾಳು | - | ಜೀವನ, ಬದುಕು |
| ಮನೋಭಾವ | - | ಮನಸ್ಸು |
| ಮೊರೆಯಿಡು | - | ಬೇಡಿಕೊಳ್ಳು |
| ಯಾತ್ರೆ | - | ಪ್ರಯಾಣ |
| ಸಮೀಪ | - | ಹತ್ತಿರ |
| ಸಾಮ್ರಾಟ | - | ಅರಸ, ರಾಜ |
| ಹುರಿದುಂಬಿಸು | - | ಪ್ರೋತ್ಸಾಹಿಸು |
| ಹೊರೆಯು | - | ತುಂಬಿಸು |

# ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

ಸಂಪರ್ಕಿಸಬೇಕಾದ ವಿಳಾಸ

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in